Funding: Tattva Heritage Foundation,Kolkata. Digitization: eGangotri.

॥ ಶ್ರೀಃ ॥

ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ಯೋಗನರಸಿಹ್ಮಾಯ ನಮಃ

ಯದುಶೈಲ (ಮೇಲುಕೋಟೆ)

ಶ್ರೀ ಯೋಗನರಸಿಹ್ಮಸ್ವಾಮಿ

ಸು ಪ್ರ ಭಾ ತ ಂ

ಜಗ್ಗೂವಕುಳಭೂಷಣ ಕವಿ
ವಿರಚಿತಂ

ಪುಸ್ತಕ ದೊರೆಯುವ ಸ್ಥಳ :
ಶ್ರೀ ಯೋಗನರಸಿಹ್ಮಕ್ಕೈಂಕರ್ಯಾಭಿವರ್ಧಿನೀ ಸಭಾ,
ಪಾಂಡವಪುರ ಮಾರ್ಗ
ಮೇಲುಕೋಟೆ.

1969] [ಬೆಲೆ 50 ಪೈಸೆ.

ನವಭಾರತ್ ಪ್ರೆಸ್, ಶೇಷಾದ್ರಿಪುರಂ, ಬೆಂಗಳೂರು-20

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಃ

ಶುಭಮಸ್ತು

ಶ್ರೀಮತೇರಾಮಾನುಜಾಯನಮಃ

ವಿಜ್ಞಾಪನೆ

ಶ್ರೀಯಃಪತಿಯಾಗಿಯೂ, ಸರ್ವೇಶ್ವರನಾಗಿಯೂ, ಅವಾಪ್ತಸಮಸ್ತಕಾಮನಾಗಿಯೂ, ಅಖಿಲ ಹೇಯ ಪ್ರತ್ಯನೀಕ ಕಲ್ಯಾಣ ಗುಣಗಣಾಕರನಾಗಿಯೂ, ಸರ್ವಾಂತರ್ಯಾಮಿಯಾಗಿಯೂ, ನಿತ್ಯಸೂರಿಸಂಸೇವ್ಯಮಾನನಾಗಿಯೂ, ದುಃಖಗಂಧರಹಿತವಾದ ನಿತ್ಯಾನಂದಮಯವಾದ ಪರಮಪದದಲ್ಲಿ ಶ್ರೀಭೂನೀಳಾಸಮೇತನಾಗಿ ನಿರತಿಶಯಾನಿರ್ವಚನೀಯ ವೈಭವ ಭವ್ಯನಾದ ಭಗವಂತನು, ಆಶ್ರಿತಸಂರಕ್ಷಣಾರ್ಥವಾಗಿಯೂ ಜ್ಞಾನಿಪ್ರಾಪ್ತಿಗಾಗಿಯೂ ಈ ಭೂಲೋಕದಲ್ಲಿ ಅನೇಕ ರೂಪದಿಂದ ಅವತರಿಸಿರುವ ವಿಷಯವು ಪುರಾಣೇತಿಹಾಸಗಳಿಂದ ಸರ್ವವಿದಿತವಾಗಿದೆ. ಅಂಥಾ ಅವತಾರಗಳಲ್ಲಿ ನರಸಿಹ್ಮಾವತಾರವೂ ಭಕ್ತನಾದ ಪ್ರಹ್ಲಾದನಿಗಾಗಿಯೇ, ಎಂಬ ವಿಷಯವೂ ವಿದಿತವಾಗಿದೆಯಷ್ಟೆ.

ಭಕ್ತನಾದ ಪ್ರಹ್ಲಾದನು ತನ್ನ ಕುಲದೈವವಾದ ಸಾಲಗ್ರಾಮ ರೂಪಿಯಾದ ನರಸಿಹ್ಮನನ್ನು ಆರಾಧಿಸುತ್ತಾ ತನ್ನ ತಂದೆಯಾದ ದುಷ್ಟ ಹಿರಣ್ಯಕಶಿಪುವನ್ನು ಕೊಲ್ಲಿಸಿದ ಪಾಪ ವಿಮೋಚನೆಗಾಗಿ ತೀರ್ಥಯಾತ್ರೆ ಮಾಡುತ್ತಾ ಗೋಮಂತ ಪರ್ವತವೆಂದೂ, ದಕ್ಷಿಣಬದರಿಕಾಶ್ರಮವೆಂದೂ ಪುರಾಣ ಪ್ರಸಿದ್ಧವಾದ ಈ ಯದುಶೈಲವನ್ನು ಬಂದು ಸೇರಿದನು. ಅಲ್ಲಿ ಕಲ್ಯಾಣಿಯೆಂಬ ಪುಣ್ಯ ತೀರ್ಥದಲ್ಲಿ ಸ್ನಾನಮಾಡುವುದಕ್ಕಾಗಿ ತನ್ನಲ್ಲಿದ್ದ ಸಾಲಗ್ರಾಮವನ್ನು ಆ ಪರ್ವತದ ಶಿಖರದಲ್ಲಿಟ್ಟು, ಕಲ್ಯಾಣೀ ಪುಷ್ಕರಣಿಯಲ್ಲಿ ಮಿಂದು ಪುನಃ ಅಲ್ಲಿ ಹೋಗಿನೋಡಲು ಸಾಲಗ್ರಾಮವನ್ನು ಕಾಣದೇ ಭಕ್ತಿಯಿಂದ ಭಗವಂತನನ್ನು ಸ್ತೋತ್ರಮಾಡಲು, ಆ ಸಾಲಗ್ರಾಮವು ಯೋಗಾರೂಢ ನರಸಿಹ್ಮ ರೂಪದಿಂದ ಪ್ರಹ್ಲಾದನಿಗೆ ದರ್ಶನಕೊಟ್ಟು ಅವನನ್ನು ಅನುಗ್ರಹಿಸಿತೆಂದು, ಇಲ್ಲಿಯ ಐತಿಹ್ಯವಿದೆ. ಈಗಲೂ ಭಕ್ತಪರಾಧೀನನಾದ ಆ ಭಗವಂತನು, ಅಷ್ಟೋತ್ತರ ಶತಸ್ಥಾನ ಸಾರಭೂತವಾದ ಯದುಶಿಖರಿ ಶಿಖರದಲ್ಲಿ ಆಶ್ರಿತರನ್ನು ಅನುಗ್ರಹಿಸುತ್ತಾ ಸರ್ವಾಭೀಷ್ಟಫಲಪ್ರದನಾಗಿ ಕಂಗೊಳಿಸುತ್ತಿರುವನು. ಆ ಭಗವಂತನ ಪ್ರೇರಣೆಯಿಂದ ಅನುಗೃಹೀತನಾದ ದಾಸನು ಅವನ ವಿಷಯಕವಾದ ಈ ಸುಪ್ರಭಾತವನ್ನು ರಚಿಸಿ ಅವನ ಚರಣಾರವಿಂದಗಳಲ್ಲಿ ಸಮರ್ಪಿಸಿರುವನು.

ಮತ್ತು ಕೊನೆಯಲ್ಲಿ ಶ್ರೀಮನ್ನೃಸಿಹ್ಮ ಮಹಾಮಂತ್ರ ಬೀಜಾಕ್ಷರಗಳಿಂದೊಡಗೂಡಿದ ಮಂಗಳ ಶ್ಲೋಕಗಳನ್ನೂ ರಚಿಸಿ ಸಮರ್ಪಿಸಿರುವನು.

ಭಕ್ತಾದಿಗಳೆಲ್ಲರೂ ಈ ಸುಪ್ರಭಾತವನ್ನು ಅನುಸಂಧಿಸಿ, ಅವನ ಅನುಗ್ರಹಕ್ಕೆ ಪಾತ್ರರಾಗಲೆಂದು ಪ್ರಾರ್ಥಿಸುತ್ತೇನೆ.

ಶ್ರೀಯದುಶೈಲಯೋಗಾರೂಢನರಸಿಹ್ಮ
ಚರಣಸರಸಿಜದಾಸದಾಸಃ
ಜಗ್ಗೂವಕುಲಭೂಷಣಃ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

First edition 1969—2000 copies

All rights reserved by :
Sree Yoganarasimhaswami
Kainkaryabhivardhini Sabha (Regd.)
MELKOTE

Printed at :
NAVBHARATH PRESS,
'VISHNU CHITTAM'
No. 10, Sirur Park, 'B' Street,
Seshadripuram,
BANGALORE - 20

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.



ಯದುಗಿರಿ (ಮೇಲುಕೋಟೆ)

ಭಗವಾನ್ ಶ್ರೀ ಯೋಗನರಸಿಹ್ಮಸ್ವಾಮಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಃ

ಶುಭಮಸ್ತು

ಶ್ರೀಮತೇ ರಾಮಾನುಜಾಯ ನಮಃ ।
ಶ್ರೀಮತೇ ನರಸಿಹ್ಮಾಯ ನಮಃ ॥

ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಂ ॥ ೧ ॥

ಉತ್ತಿಷ್ಠೋತ್ತಿಷ್ಠ ಗೋವಿಂದ ಉತ್ತಿಷ್ಠ ಗರುಡಧ್ವಜ ।
ಉತ್ತಿಷ್ಠ ಕಮಲಾಕಾಂತ ತ್ರೈಲೋಕ್ಯಂ ಮಂಗಳಂ ಕುರು ॥ ೨ ॥

ಸ್ಮೃತ್ವಾ ತಾತವಧಂ ಸ್ವಕಾರಣಭವಂ ಖಿದ್ಯನ್ನಟನ್ಭೂತಲಂ
ಪ್ರಹ್ಲಾದಃ ಪ್ರತಿಪದ್ಯ ಪರ್ವತಮಮುಂ ಗೋಮಂತ ಮಂತರ್ಮುಖಃ ।
ಸಾಲಗ್ರಾಮತನುಂ ತನುಂ ನರಹರೇ ಭೋತ್ಕ್ಷಂ ನಿಧಾಯ ಕ್ವಚಿತ್
ಸ್ನಾತ್ವೈತ್ಯ ತ್ವದದರ್ಶನಾತ್ಸ್ತುತಿಪರಸ್ತ್ವಾಮಾಪ ಸೂಷೋಽಸ್ತುತೇ ॥ ೧ ॥

ತಾತ್ಪರ್ಯಾರ್ಥ

ಎಲೈ ನರಸಿಹ್ಮನೇ, ಭಕ್ತನಾದ ಪ್ರಹ್ಲಾದನು ತನ್ನ ತಂದೆಯ ವಧಕ್ಕೆ ತಾನೇ ಕಾರಣವೆಂದು ಖೇದದಿಂದ ತನ್ನ ಪಾಪಪರಿಹಾರಾರ್ಥವಾಗಿ ಪುಣ್ಯತೀರ್ಥಕ್ಷೇತ್ರ ಯಾತ್ರೆ ಮಾಡುತ್ತಾ ಈ ಗೋಮಂತಪರ್ವತವನ್ನು ಬಂದು ಸೇರಿದನು, ತನ್ನ ಕುಲದೈವತವಾದ ಸಾಲಿಗ್ರಾಮವನ್ನು ಪರ್ವತಶಿಖರದಲ್ಲಿಟ್ಟು ಕಲ್ಯಾಣೀತೀರ್ಥದಲ್ಲಿ ಸ್ನಾನಮಾಡಿ ಪುನಃ ಬಂದು ನೋಡಲು ಸಾಲಿಗ್ರಾಮವನ್ನು ಕಾಣದೇ ದುಃಖದಿಂದ ನಿನ್ನನ್ನು ಸ್ತೋತ್ರ ಮಾಡಲು ನೀನು ಯೋಗಾಸನಾರೂಢನಾದ ನರಸಿಹ್ಮಮೂರ್ತಿಯಾಗಿ ಆ ಪ್ರಹ್ಲಾದನಿಗೆ ದರ್ಶನವಿತ್ತಿಯಲ್ಲವೇ, ಭಕ್ತಪರಾಧೀನನಾದ ನಿನಗೆ ಸುಪ್ರಭಾತವು.

ಯೋಗೀಂದ್ರಮಾನಸಸರೋವರರಾಜಹಂಸ
ಯದ್ವದ್ರಿಶೃಂಗತಟಕಂದರಭವ್ಯವಾಸ ।

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯೋಗಾಸನಪ್ರಕಟಿತಾಶ್ರಿತಕಾಂಕ್ಷಿತಾರ್ಥ–
ದಾನಾತ್ತಯೋಗ ನೃಹರೇ ತವ ಸುಪ್ರಭಾತಂ ॥ ೨ ॥

ನಿರಂತರವೂ ನಿನ್ನನ್ನೇ ಧ್ಯಾನ ಮಾಡುವ ಯೋಗಿಗಳ ಮನಸ್ಸೆಂಬ ಮಾನಸ ಸರೋವರದಲ್ಲಿ ಕ್ರೀಡಿಸುತ್ತಿರುವ ರಾಜಹಂಸವೇ, ಯಾದವಾದ್ರಿಶಿಖರದ ಗುಹೆಯಲ್ಲಿ ನಿತ್ಯ ವಾಸಮಾಡುತ್ತಿರುವವನೇ, ಆಶ್ರಿತರ ಇಷ್ಟಾರ್ಥಗಳನ್ನು ಪೂರೈಸುವುದಕ್ಕಾಗಿಯೋ ಎಂಬಂತೆ ಯೋಗಾಸನದಲ್ಲಿ ಕುಳಿತಿರುವ ನರಸಿಹ್ಮನೇ, ನಿನಿಗೆ ಸುಪ್ರಭಾತವು.

ಪ್ರಹ್ಲಾದ ರಕ್ಷಣಕೃತೇ ನರಸಿಹ್ಮರೂಪಃ
ಸ್ತಂಭೋದರಾನ್ನನರ್ಚುಡಿತ್ಯುದಭೂರ್ಮುರಾರೇ ।
ಭಕ್ತಾರ್ಥಮೇವಮವಿಚಿಂತಿತಚಿತ್ರವೇಷಃ
ಭಾಸಿ ಪ್ರಭೋ ನರಮೃಗೇಂದ್ರ ತವ ಪ್ರಭಾತಂ ॥ ೩ ॥

ಎಲೈ ನನ್ನ ಸ್ವಾಮಿಯಾದ ನರಸಿಹ್ಮನೇ, ಭಕ್ತನಾದ ಪ್ರಹ್ಲಾದನನ್ನು ರಕ್ಷಿಸುವುದಕ್ಕಾಗಿ ಮನುಷ್ಯಶರೀರವುಳ್ಳವನಾಗಿಯೂ ಸಿಹ್ಮದ ತಲೆಯುಳ್ಳವನಾಗಿಯೂ, ಅವಕಾಶವಿಲ್ಲದ ಕಂಬದಿಂದ ಆವಿರ್ಭವಿಸಿದೆಯಲ್ಲವೇ, ಅಹುದು, ಭಕ್ತನಿಗಾಗಿ ಚಿಂತನೆಗೂ ಎಟುಕದ ಆಶ್ಚರ್ಯಕರವಾದ ವೇಷವನ್ನು ಧರಿಸುತ್ತೀಯೆ, ಭಕ್ತನ ರಕ್ಷಣೆಯಲ್ಲಿ ಅಷ್ಟು ತ್ವರೆಯಲ್ಲವೇ ನಿನಗೆ, ಹಿಂದೆ ಮುರಾಸುರನನ್ನೂ ಭಕ್ತರಿಗೋಸ್ಕರವೇ ಸಂಹರಿಸಿದವನು ನೀನು. ನಿನಗೆ ಸುಪ್ರಭಾತವಾಗಲಿ.

ಚಕ್ರಾಯುಧೋಪಿ ನಖದಾರಿತಶತ್ರುವಕ್ಷಾಃ
ಚಂದ್ರಾನನೋಪಿ ಧೃತಸಿಹ್ಮಮುಖೋ ಮುಕುಂದ ।
ಕಂಠಾರ್ಪಿತಾಯತಸಿರೋ ವನಮಾಲ್ಯಪೀದಂ
ಭಕ್ತಾರ್ಥಮೇವ ನನು ತೇ ನೃಹರೇ ಪ್ರಭಾತಂ ॥ ೪ ॥

ಎಲೈ ಐಹಿಕಾಮುಷ್ಮಿಕ ಫಲಪ್ರದನಾದ ನರಸಿಹ್ಮನೇ, ನೀನು ಚಕ್ರಾಯುಧದಿಂದ ಶತ್ರುವನ್ನು ಸಂಹರಿಸಬಹುದಾದರೂ, ನಿನ್ನ ಕೈ ಉಗುರುಗಳಿಂದಲೇ ಶತ್ರುವಿನ ವಕ್ಷಸ್ಥಲವನ್ನು ಸೀಳಿದೆ, ಚಂದ್ರನಂತೆ ಮನೋಹರವಾದ ಮುಖವುಳ್ಳವನು ನೀನು, ಆದರೂ ಶತ್ರುಸಂಹಾರಕ್ಕಾಗಿ ಭಯಂಕರವಾದ ಸಿಹ್ಮಮುಖವನ್ನು ಧರಿಸಿದೆ, ನೀನು ವನಮಾಲಾಧಾರಿಯಾದರೂ, ಆ ಶತ್ರುವಿನ ಕರುಳನ್ನೇ ಕಂಠದಲ್ಲಿ ಧರಿಸಿದೆ, ಇಷ್ಟೂ ಯಾರಿಗಾಗಿ, ಭಕ್ತನಿಗಾಗಲ್ಲವೇ, ಭಕ್ತನಿಗಾಗಿ ಯಾವ ಕೆಲಸವನ್ನೂ ಹಿಂಜರಿಯದೇ ಮಾಡುವವನು ನೀನು, ನಿನಿಗೆ ಸುಪ್ರಭಾತವಾಗಲಿ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪ್ರಹ್ಲಾದಭಕ್ತಿಭರವಶ್ಯಮನಾ ಮುರಾರೇ
ತತ್ಪ್ರಾರ್ಥನಾನುಗುಣಮತ್ರ ನೃಸಿಹ್ಮರೂಪಃ ॥
ಅರ್ಚ್ಯಾಕೃತಿ ರ್ವಿಲಸಸಿ ಪ್ರತಿಪನ್ನಯೋಗಃ
ವಾತ್ಸಲ್ಯಮಾಶ್ರಿತಜನೇ ಬತ ತೇ ಪ್ರಭಾತಂ ॥ ೫ ॥

ಎಲೈ ಮುರಾಸುರ ಸಂಹಾರಕನೇ, ಭಕ್ತನಾದ ಪ್ರಹ್ಲಾದನ ನಿರತಿಶಯಭಕ್ತಿಗೆ ಪರವಶನಾಗಿ, ಅವನ ಪ್ರಾರ್ಥನೆಯಂತೆ ಈ ಯಾದವಾದ್ರಿಯಲ್ಲಿ ನರಸಿಹ್ಮ ರೂಪದಿಂದಲೇ ಯೋಗಾರೂಢನಾಗಿ ಅರ್ಚಕಪರಾಧೀನವಾದ ಅರ್ಚ್ಯಾಕಾರವನ್ನು ಪೊಂದಿ ಪ್ರಕಾಶಿಸುತ್ತಲಿದೀಯೆ, ಇದಕ್ಕೆ ಭಕ್ತಜನರಲ್ಲಿ ನಿನಗಿರುವ ವಾತ್ಸಲ್ಯವೇ ಕಾರಣವಲ್ಲವೇ, ಭಕ್ತಪರಾಧೀನನಾದ ನಿನಗೆ ಸುಪ್ರಭಾತವಾಗಲಿ.

ಉತ್ತುಂಗಶೃಂಗಮಧಿರುಹ್ಯ ಕುತಶ್ಚಿತೇಽಸಿ
ವೃದ್ಧೋಽಪಿಮೂರಗತ ಭಕ್ತಜನೇಕ್ಷಣಾರ್ಥಂ ।
ಕಿಂವಾ ಸುದೃಷ್ಟಚರ ಏವ ಜರತ್ಸ್ವಭಾವಃ
ವಾತ್ಸಲ್ಯಕಾರ್ಯಮಿದಮಚ್ಯುತ ತೇಪ್ರಭಾತಂ ॥ ೬ ॥

ಎಲೈ ಆಶ್ರಿತರನ್ನು ಕೈಬಿಡದೇ ರಕ್ಷಿಸುವ ಸ್ವಭಾವವುಳ್ಳ ನರಸಿಹ್ಮನೇ, ಎತ್ತರವಾದ ಬೆಟ್ಟವನ್ನು ಹತ್ತಿ ಅಲ್ಲಿ ಕುಳಿತಿರುವೆ, ನೀನು ವೃದ್ಧನಲ್ಲವೇ, ಆದರೂ ಮೇಲೆ ಕುಳಿತಿರಲು ಕಾರಣವೇನು, ದೂರದಲ್ಲಿರುವ ನಿನ್ನ ಭಕ್ತರನ್ನು ನೋಡಬೇಕೆಂದೇ, ಲೋಕದಲ್ಲಿ ವೃದ್ಧರ ಸ್ವಭಾವವೇ ಹೀಗೆ, ಅವರುಗಳಿಗೆ ತನ್ನಲ್ಲಿ ಪ್ರೀತಿಯಿರಲಿ, ಇಲ್ಲದಿರಲಿ, ತನ್ನ ವಾತ್ಸಲ್ಯವು ಎಲ್ಲಿ ಹೋದೀತು. ಆದ್ದರಿಂದಲೇ ನೀನು ಅಚ್ಯುತ, ನಿನಗೆ ಸುಪ್ರಭಾತವಾಗಲಿ.

ಕಲ್ಯಾಣದಿವ್ಯಸರಸೀ ಪ್ರತಿಬಿಂಬಿತೋಽಯಂ
ಯದ್ಗಿರಿಶೃಂಗವಿತತೋಚ್ಛ್ರಿತ ಗೋಪುರೋಽಪಿ ।
ಪ್ರಾತಃಪವಿತ್ರಸಲಿಲೇ ನನು ಮಜ್ಜತೀವ
ಶ್ರೀಮನ್ನೃಸಿಹ್ಮ ತದಭೂತ್ತವ ಸುಪ್ರಭಾತಂ ॥ ೭ ॥

ಈ ಯಾದವಾದ್ರಿಯಲ್ಲಿರುವ ಉನ್ನತವಾದ ಬೆಟ್ಟದ ಗೋಪುರವು ಕಲ್ಯಾಣೀ ದಿವ್ಯ ಸರೋವರದಲ್ಲಿ ಪ್ರತಿಫಲಿಸಿದೆ, ಮೃದುಮಧುರವಾದ ಅಲೆಗಳು ಚಲಿಸುವಾಗ ಗೋಪುರವೂ ನೀರಿನಲ್ಲಿ ಅಲುಗುವುದು, ಆದನ್ನು ನೋಡಿದರೆ ಪ್ರಾತಃಕಾಲದಲ್ಲಿ ಕಲ್ಯಾಣೀ ಪುಣ್ಯ ತೀರ್ಥದಲ್ಲಿ ಮುಳುಗಿ ಈಜಾಡಿ ಸ್ನಾನಮಾಡುತ್ತಲಿದಯೋ ಎಂಬಂತಿದೆ, ಆದ್ದರಿಂದ ಬೆಳಕು ಹರಿಯಿತು, ನಿನಗೆ ಸುಪ್ರಭಾತವಾಗಲಿ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೇಯಾದವಾದ್ರಿರಮಣೀಯವಿಶಾಲಸಾನು
ವೃಕ್ಷೇಷು ಸುಪ್ತಿಮಪಹಾಯ ಪತತ್ರಿಣೋಽಪಿ ।
ಕೂಜಂತಿ ಕರ್ಣಮಧುರಂ ತವ ಜಾಗರಾಯ
ಯದ್ವದ್ರಿದೀಪ ನೃಹರೇ ತವ ಸುಪ್ರಭಾತಂ ॥ ೮ ॥

ಮನುಷ್ಯರ ಅಜ್ಞಾನಾಂಧಕಾರವನ್ನು ಪರಿಹರಿಸಲು ಎತ್ತರವಾದ ಯಾದವಾದ್ರಿ ಶಿಖರದಲ್ಲಿ ಬೆಳಕಿನಂತೆ ಬೆಳಗುತ್ತಿರುವ ನರಸಿಹ್ಮನೇ, ಈ ಯದುಗಿರಿಯ ಮನೋಹರವಾದ ವಿಶಾಲ ಸಾಲು ಪ್ರದೇಶಗಳಲ್ಲಿ ಬೆಳೆದಿರುವ ಉನ್ನತ ವೃಕ್ಷಗಳಲ್ಲಿ ರಾತ್ರಿಯೆಲ್ಲಾ ನಿದ್ರಿಸಿ ಬೆಳಗಾಗುತ್ತಲು ಎಚ್ಚೆತ್ತು ನಾನಾ ವಿಧವಾದ ಪಕ್ಷಿಗಳು ನಿನ್ನನ್ನು ಎಚ್ಚರಿಸಲು ವಂದಿಗಳಂತೆ ಕಿವಿಗಿಂಪಾಗಿ ದನಿಗೈಯ್ಯುತ್ತಿರುವವು. ನಿನಗೆ ಸುಪ್ರಭಾತವಾಗಲಿ.

ತ್ವಯ್ಯಾಹಿತಾಖಿಲಭರಾ ಮನುಜಾಸ್ಸಭಕ್ತಿ
ಕಲ್ಯಾಣತೀರ್ಥಮವಗಾಹ್ಯ ಧೃತೋರ್ಧ್ವಪುಂಡ್ರಾಃ ।
ತ್ವನ್ಮಂದಿರಾಂಕಣತಟೇ ಫಲಪುಷ್ಪಹಸ್ತಾಃ
ತಿಷ್ಠಂತಿ ನಾಥ ನೃಹರೇ ತವ ಸುಪ್ರಭಾತಂ ॥ ೯ ॥

ಸರ್ವ ಜಗತ್ಸ್ವಾಮಿಯಾದ ನರಸಿಹ್ಮನೇ, ನೀನೇ ಗತಿಯೆಂದು ಭಕ್ತಿ ಪುರಸ್ಸರವಾಗಿ ಕಲ್ಯಾಣೀ ತೀರ್ಥದಲ್ಲಿ ಮಿಂದು ಊರ್ಧ್ವಪುಂಡ್ರವನ್ನು ಧರಿಸಿ ಕೈಗಳಲ್ಲಿ ಫಲಪುಷ್ಪಗಳನ್ನು ಪಿಡಿದು ನಿನ್ನ ಮಂದಿರದ ಮುಂಭಾಗದಲ್ಲಿ ನಿನ್ನ ದರ್ಶನಕ್ಕಾಗಿ ಭಕ್ತರು ಕಾದು ನಿಂದಿಹರು ಎಚ್ಚರು, ನಿನಗೆ ಸುಪ್ರಭಾತವಾಗಲಿ.

ಪ್ರಾಲೇಯಶೀತಲತರಂಗವಹಾಷ್ಟತೀರ್ಥ
ಪೂತಾಂಬುಶೀಕರಕಣೋದ್ವಹನಾತಿಮಂದಃ ।
ಸಾನುಪ್ರರೂಢಸುಮಸಂತತಿಗಂಧವಾಹೀ
ವಾತಿ ಪ್ರಭೋ ಮರುದಯೇ ತವ ಸುಪ್ರಭಾತಂ ॥ ೧೦ ॥

ಹಿಮದಿಂದ ತಣ್ಣಗಿರುವ ಅಷ್ಟ ತೀರ್ಥಗಳ ಅಲೆಗಳ ಮೇಲೆ ಬೀಸಿ ಅವುಗಳ ಜಲ ತುಂತುರುಗಳನ್ನು ಹೊತ್ತು ಮಂದಗಮನವುಳ್ಳ ಮಾರುತವು ಸಾನು ಪ್ರದೇಶದಲ್ಲಿ ಪುಟ್ಟಿಹ ಪರಿಮಳಪೂರ್ಣವಾದ ಪುಷ್ಪಗಳ ಗಂಧದೊಡನೇ ಬೀಸುತ್ತಿಹುದು. ಮಾರುತವೂ ಕೂಡ ನಿನಗೆ ಶೈತ್ಯೋಪಚಾರವನ್ನೆಸಗುವಂತಿಹುದು ಎಲೈ ನರಸಿಹ್ಮನೇ ನಿನಗೆ ಸುಪ್ರಭಾತವಾಗಲಿ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತೀರ್ಥಾಭಿಷೇಕಸಮಯೇ ನರಸಿಂಹ ಸಾಂದ್ರ
ಹಾರಿದ್ರಚೂರ್ಣ ಪರಿಕರ್ಮಿತ ಸರ್ವಗಾತ್ರಃ ।
ಸಾಕ್ಷಾದ್ಗುಹಾಂತರಗತೋ ಬತ ಕೇಸರೀವ
ಸಂದೃಶ್ಯಸೇ ಯದುಗಿರೌ ತವ ಸುಪ್ರಭಾತಂ ॥ ೧೧ ॥

ಎಲೈ ನರಸಿಹ್ಮನೇ, ಅಭಿಷೇಕ ಸಮಯದಲ್ಲಿ ನಿನ್ನ ದಿವ್ಯ ಮಂಗಳ ವಿಗ್ರಹವನ್ನು ಅರಿಶಿನದ ಪುಡಿಯಿಂದ ಅಲಂಕರಿಸುವರಲ್ಲವೇ, ಆ ಸಂದರ್ಭದಲ್ಲಿ ನಿನ್ನನ್ನು ದರ್ಶಿಸಿದರೇ ಸಾಕ್ಷಾತ್ಸಿಹ್ಮವೇ ಗುಹೆಯಲ್ಲಿ ಕುಳಿತಿದೆಯೋ ಎಂಬಂತೆ ಭ್ರಾಂತಿಯನ್ನುಂಟುಮಾಡುವಂತಿದೆ ಅರಿಶಿನ ಚೂರ್ಣದಿಂದ ಅಲಂಕೃತವಾದ ನಿನ್ನ ದಿವ್ಯ ಮಂಗಳ ವಿಗ್ರಹವು ಅಷ್ಟು ಸ್ಪೃಹಣೀಯವಾದುದು. ನಿನಗೆ ಸುಪ್ರಭಾತವಾಗಲಿ.

ಭಕ್ತಾರ್ಥಮೇವ ಯದುಶೈಲತಟೇ ನಿಷಣ್ಣಃ
ವಾತ್ಸಲ್ಯಸೋಢಜನತಾರಚಿತಾಪರಾಧಃ !
ಸೌಲಭ್ಯಕೃಷ್ಟಜನಚಿತ್ತವಿಲೋಚನೋಸಿ
ಶ್ರೀಮನ್ನೃಸಿಹ್ಮ ಯದುಶೈಲಪತೇ ಪ್ರಭಾತಂ ॥ ೧೨ ॥

ಯದುಗಿರಿವಲ್ಲಭನಾದ ನರಸಿಹ್ಮನೇ, ನೀನು ಭಕ್ತರಿಗಾಗಿಯೇ ಈ ಯದುಶೈಲ ಶಿಖರದಲ್ಲಿ ಕುಳಿತು ನಿನ್ನ ವಾತ್ಸಲ್ಯವೆಂಬ ಗುಣದಿಂದ ನಿನ್ನಲ್ಲಿ ಎಸಗುತ್ತಿರುವ ಅಪರಾಧಗಳೆಲ್ಲವನ್ನೂ ಕ್ಷಮಿಸುತ್ತಿರುವೆ, ಮತ್ತು ಸೌಲಭ್ಯವೆಂಬ ಗುಣದಿಂದ ಎಲ್ಲರಿಗೂ ದರ್ಶನ ಕೊಟ್ಟು ಜನಗಳ ಮನಸ್ಸನ್ನೂ ಕಣ್ಣುಗಳನ್ನೂ ಆಕರ್ಷಿಸುತ್ತಲಿರುವೇ, ಕಲ್ಯಾಣಗುಣ ಪೂರ್ಣನಾದ ನಿನಗೆ ಸುಪ್ರಭಾತವಾಗಲಿ.

ಅಷ್ಟೋತ್ತರೋತ್ತಮಶತಸ್ಥಲಸಾರಭೂತೇ
ವಿಖ್ಯಾತದಕ್ಷಿಣಬದರ್ಯಬಿಧೇ ಮುನೋಜ್ಜೀ ।
ಶ್ರೀಯಾದವಾಚಲತಟೇಕೃತಸನ್ನಿಧಾನ
ಯೋಗಾಸನಸ್ಥ ನೃಹರೇ ತವ ಸುಪ್ರಭಾತಂ ॥ ೧೩ ॥

ನೂರೆಂಟು ದಿವ್ಯ ದೇಶಗಳಲ್ಲಿ ಸಾರಭೂತವಾದ ಈ ಯಾದವಾದ್ರಿಯಲ್ಲಿ ನೀನು ನೆಲಸಿರಲು ಕಾರಣವುಂಟು. ಇದು ದಕ್ಷಿಣ ಬದರಿಕಾಶ್ರಮವಲ್ಲವೇ, ಹಿಂದೆ ನೀನೇ ಉತ್ತರ ಬದರಿಕಾಶ್ರಮದಲ್ಲಿ ನರನಾಗಿಯೂ ನಾರಾಯಣನಾಗಿಯೂ ಬಹಳ ಕಾಲ ತಪಸ್ಸು ಮಾಡಿ ಮಂತ್ರೋಪದೇಶಮಾಡಿ ಪ್ರಥಮ ಗುರುವಾದೆ, ಈಗ ಯೋಗಕ್ಕೆ ಪವಿತ್ರ ಸ್ಥಲವಿದೆಂದು ದಕ್ಷಿಣ ಬದರಿಕಾಶ್ರಮದಲ್ಲಿ ಯೋಗಾರೂಢನಾಗಿ ಕುಳಿತಿರುವೆಯಲ್ಲವೇ, ಲೋಕೋಜ್ಜೀವನಕ್ಕಾಗಿ ಶ್ರಮಿಸುತ್ತಲಿರುವ ನರಸಿಹ್ಮನೇ ನಿನಗೆ ಸುಪ್ರಭಾತವಾಗಲಿ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಧೃತ್ವಾತ್ತಪಾಣಿಯುಗಲೇನ ಚ ಶಂಖ ಚಕ್ರೇ
ಹಸ್ತದ್ವಯೇನ ಪರಿದರ್ಶಿತಪಾದಯುಗ್ಮಃ ।
ಏತದ್ವ್ಯಯಾಂಕಿತಭುಜಾ ಇದಮಾಶ್ರಯಧ್ವ
ಮಿತ್ಯಾದಿಶಸ್ಯಯಿಕಿಮುತ್ರ ಹರೇ ಪ್ರಭಾತಂ ॥ ೧೪ ॥

ಆಶ್ರಿತರ ಪಾಪಗಳನ್ನು ಪರಿಹರಿಸುವ ನರಸಿಹ್ಮನೇ, ಎರಡು ಕೈಗಳಲ್ಲೂ ಶಂಖಚಕ್ರ ಗಳನ್ನು ಧರಿಸಿರುವ ಮತ್ತು ಇನ್ನೆರಡು ಕೈಗಳನ್ನು ಜಾನುಗಳ ಮೂಲಕ ಪಾದಗಳ ವರಿವಿಗೂ ನೀಡಿರುವ ನಿನ್ನನ್ನು ದರ್ಶಿಸಿದರೆ ಈ ಭಾವವು ಸ್ಫುರಿಸುವುದು, ಎಲೈ ಭಕ್ತರೇ ನಿಮ್ಮ ಗುರುಗಳ ಮೂಲಕ ತಪ್ತ ಶಂಖ ಚಕ್ರಾಂಕಿತ ಬಾಹುಮೂಲರಾಗಿ ಈ ಎರಡು ಚರಣ ಗಳನ್ನೂ ಆಶ್ರಯಿಸಿರಿ ಎಂದು ಉಪದೇಶ ಮಾಡುತ್ತಲಿರುವೆಯೋ ಎಂಬಂತೆ ಕಾಣುವೆ ಇದು ದಕ್ಷಿಣ ಬದರಿಕಾಶ್ರಮವಲ್ಲವೇ, ಆದ್ದರಿಂದಲೇ ಈ ಉಪದೇಶವೂ ಸಮ್ಮತವಾಗಿದೆ. ನಿನಗೆ ಸುಪ್ರಭಾತವಾಗಲಿ.

ಮತ್ಯಾಳಿದುಷ್ಕೃತಗಜವ್ರಜಪಿಂಗದೃಷ್ಟೇ
ಪಂಚಾಗ್ರ್ಯಭಾಗವತ ಸೇವಿತಪಾದಪದ್ಮ ।
ಭಕ್ತಾರ್ಪಿತಾಖಿಲಪರಿಷ್ಕರಣೋಜ್ವಲಾಂಗ
ಯದ್ವಾದ್ರಿನಾಥನೃಹರೇ ತವಸುಪ್ರಭಾತಂ ॥ ೧೫ ॥

ಜನಗಳ ಪಾಪರಾಶಿಯೆಂಬ ಆನೇ ಗುಂಪಿಗೆ ಸಿಹ್ಮನೇ, ಸರ್ವಪಾಪ ನಾಶಕನೇ, ಪಂಚಭಾಗವತೋತ್ತಮರಿಂದ ಸೇವಿಸಲ್ಪಡುತ್ತಿರುವ ಚರಣ ಕಮಲನೇ, ನಿನ್ನ ಪ್ರೇರಣೆ ಯಿಂದ ಭಕ್ತರು ಸಮರ್ಪಿಸಿದ ಆಭರಣಗಳಿಂದಲಂಕೃತ ದಿವ್ಯಮಂಗಳವಿಗ್ರಹನೇ ಯಾದವಾದ್ರಿ ಕ್ಷೇತ್ರನಿತ್ಯವಾಸ ರಸಿಕನೇ, ನರಸಿಹ್ಮ, ನಿನಗೆ ಸುಪ್ರಭಾತವಾಗಲಿ.

ವೃಕ್ಷಾತ್ಮತಾಮುಪಗತಾ ಇಹ ಸೂರಯೋಪಿ
ಪುನ್ನಾಗಚಂಪಕರಸಾಲ ಮುಖಸ್ವರೂಪಾಃ ।
ಶಾಖಾಭುಜಾಗ್ರವಿಧೃತಪ್ರಸವಾಃ ಪಿಕಾಳಿ
ನಾದೋಚ್ಚಸಾಮಮುಖರಾಸ್ತವ ಸುಪ್ರಭಾತಂ ॥ ೧೬ ॥

ಎಲೈ ನರಸಿಹ್ಮನೇ, ವೈಕುಂಠದಲ್ಲಿ ನಿತ್ಯ ವಾಸಮಾಡುವ ನಿತ್ಯಸೂರಿಗಳು ಈ ಯಾದ ವಾದ್ರಿಯಲ್ಲಿ ನಿನ್ನ ಸೇವೆ ಮಾಡಬೇಕೆಂಬ ಆಸೆಯಿಂದ, ಸುರಗಿ ಸಂಪಿಗೆ, ಮಾವು, ಇವೇ ಮೊದಲಾದ ವೃಕ್ಷಗಳ ಸ್ವರೂಪವನ್ನು ತಾಳಿ ಕೊಂಬೆಗಳೆಂಬ ತೋಳನ್ನು ನೀಡಿ ನಿನಗೆ ಪುಷ್ಪಗಳನ್ನು ಸಮರ್ಪಿಸುತ್ತಿರುವರು, ಮತ್ತು ವೈಕುಂಠದಲ್ಲಿ ಸಾಮಗಾನ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಾಡುವಂತೇ ಇಲ್ಲೂ ಕೋಗಿಲೆಗಳ ನಾದದ ನೆಪದಿಂದ ಸಾಮಗಾನ ಮಾಡುತ್ತಿರುವರು ಅವುಗಳನ್ನು ಅಂಗೀಕರಿಸಲು ನೀನೆಚ್ಚರು ಸುಪ್ರಭಾತವಾಗಲಿ.

ವಕ್ಷಸ್ಸ್ಥಲೇನ ಕಮಲಾಂ ಸತತಂವಹನ್ಸನ್
ಯೋಗೈಕಸಕ್ತಹೃದಯೋಸಿ ವಿಚಿತ್ರ ಮೇತತ್ ।
ಭಕ್ತೇಷ್ಟದಃಪುರುಷಕಾರಮಪೇಕ್ಷಸೇವಾ
ನೂನಂ ನೃಸಿಹ್ಮಯಮಶೈಲಪತೇ ಪ್ರಭಾತಂ ॥ ೧೭ ॥

ನರಸಿಹ್ಮನೇ, ನಿರಂತರವೂ ನೀನು ವಕ್ಷಸ್ಥಲದಲ್ಲಿ ಲಕ್ಷ್ಮಿಯನ್ನು ಧರಿಸಿರುತ್ತೀಯೆ, ಯೋಗಾಸಕ್ತನಾಗಿಯೂ ಇರುತ್ತೀಯೇ, ಇದು ಆಶ್ಚರ್ಯ, ಯೋಗಿಗೆ ಸ್ತ್ರೀಯ ಸಂಪರ್ಕವೇ ಕೂಡದಲ್ಲವೇ, ನೀನು ಯೋಗದಲ್ಲಿದ್ದೂ ವಕ್ಷಸ್ಥಲದಲ್ಲಿ ಲಕ್ಷ್ಮಿಯನ್ನು ಧರಿಸಿರುವುದನ್ನು ನೋಡಿದರೆ, ಭಕ್ತರ ಇಷ್ಟಾರ್ಥವನ್ನು ಕೊಡುವ ನೀನು ಪುರುಷಕಾರವನ್ನು ಅಷ್ಟೇಕ್ಷಿಸುವಂತೆ ತೋರುತ್ತೆ. ನಿಶ್ಚಯ, ಪುರುಷಕಾರವಿಲ್ಲದೆ ನೀನು ಯಾವ ಕೆಲಸವನ್ನೂ ಮಾಡುವದಿಲ್ಲವಲ್ಲವೇ, ಈ ರೀತಿ ದಯಾಪರನಾದ ನರಸಿಹ್ಮನೆ ನಿನಗೆ ಸುಪ್ರಭಾತವಾಗಲಿ.

ಯೋಗಾಸನಸ್ಥಮುರುಲಂಬಿತಜಾನುಬಾಹುಂ
ಸ್ತೋಕಾವನಮ್ರವದನಂ ಕುಟಿಲಭ್ರುವಂಚ ।
ಪೃಚ್ಛಂತಮಾಗತಸುಖಾಗಮನಂ ತ್ವಿವ ತ್ವಾಂ
ಪಶ್ಯಾಮಿನಾಥ ನೃಹರೇ ತವ ಸುಪ್ರಭಾತಂ ॥ ೧೮ ॥

ಸರ್ವಲೋಕ ಸ್ವಾಮಿಯೇ, ನರಸಿಂಹ್ಮ ಜಾನುಗಳ ಮೇಲೆ ತೋಳುಗಳನ್ನು ನೀಳವಾಗಿಟ್ಟು, ಸ್ವಲ್ಪ ತಲೆಬಾಗಿ, ಹುಬ್ಬುಗಳನ್ನೆತ್ತಿ ಯೋಗಾಸನದಲ್ಲಿ ಕುಳಿತಿರುವ ನಿನ್ನನ್ನು ದರ್ಶಿಸಿದರೆ ಬಂದ ಭಕ್ತರ ಸುಖಾಗಮನವನ್ನು ಕೇಳುತ್ತಲಿರುವೆಯೋ ಎಂಬಂತೆ ತೋರುತ್ತೆ,, ನಿನಗೆ ಸುಪ್ರಭಾತವಾಗಲಿ.

ರಾಮಾನುಜಾರ್ಯಹೃದಯಾತುಲಮೋದದಾಯಿನ್
ಶ್ರೀವೈಷ್ಣವಾರಿನೃಪಚೋಳನಿಷೂದನೇನ ।
ಶ್ರೀ ಭಾಷ್ಯಕಾರಕೃತಮಂಗಲಸನ್ನುತಾದ್ಯ
ಶ್ರೀಯಾದವಾದ್ರಿನೃಹರೇ ತವ ಸುಪ್ರಭಾತಂ ॥ ೧೯ ॥

ಶ್ರೀ ಯದುಶೈಲ ಶಿಖರದಲ್ಲಿ ಬೆಳಗುತ್ತಿರುವ ನರಸಿಂಹ್ಮನೇ, ಶ್ರೀ ವೈಷ್ಣವ ದ್ವೇಷಿಯಾದ ಕ್ರೂರ ಸ್ವಭಾವದ ಕ್ರಿಮಿಕಂಠ ಚೋಳರಾಜನನ್ನು ಸಂಕಲ್ಪ ಮಾತ್ರದಿಂದಲೇ ನಾಶ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಗೊಳಿಸಿ ಲೋಕಗುರು ರಾಮಾನುಜಾಚಾರ್ಯರ ಮನಸ್ಸನ್ನು ಸಂತೋಷಪಡಿಸಿ, ಅವರ ಮಂಗಳಾಶಾಸನಕ್ಕೆ ಪಾತ್ರನಾದೆಯಲ್ಲವೇ, ದುಷ್ಟ ಶಿಕ್ಷಣವೂ ಶಿಷ್ಟ ಪರಿಪಾಲನವೂ, ನಿನಗೆ ಸೇರಿದ್ದು, ಆಶ್ರಿತರಕ್ಷಣ ತತ್ಪರನಾದ ನಿನಗೆ ಸುಪ್ರಭಾತವಾಗಲಿ.

ಶಾಂತಿರ್ಮುಖೇ ನಯನಯೋರಪಿಸನ್ನಿಧತ್ತೇ
ಪಾಣಿದ್ವಯಂ ಪದಯುಗಂ ಪರಿದರ್ಶಯತ್ತೇ !
ಭಕ್ತಾಳಿಸಂಶ್ರಯಣಯೋಗ್ಯಮಿತೀವಶಂಸತ್
ಭಾತಿ ಪ್ರಭೋ ನರಮೃಗೇಂದ್ರ ತವ ಪ್ರಭಾತಂ ॥ ೨೦ ॥

ನರಸಿಹ್ಮನೇ, ನೀನು ಸಿಹ್ಮಮುಖದವನಾದರೂ ನಿನ್ನ ಮುಖವಲ್ಲಿ, ಕಣ್ಣುಗಳಲ್ಲಿ, ಶಾಂತಿಯು ತುಂಬಿತುಳುಕುತ್ತಲಿದೆ, ಈ ರೀತಿ ಶಾಂತಾತ್ಮಕನಾಗಿ ಎರಡು ಕೈಗಳಿಂದಲೂ ನಿನ್ನ ಎರಡು ಪಾದಗಳನ್ನೂ ತೋರಿಸುತ್ತಲಿರುವುದನ್ನು ನೋಡಿದರೆ, ಈ ಎರಡು ಚರಣಾರವಿಂದಗಳನ್ನೂ ಆಶ್ರಯಿಸಿ ಉಜ್ಜೀವಿಸಿರಿ, ಎಂದು ಭಕ್ತರಿಗೆ ಉಪದೇಶಿಸುತ್ತಿರುವಂತೆ ತೋರುವುದು, ಭಕ್ತರ ಉಜ್ಜೀವನಕ್ಕಾಗಿಯೇ ಯದುಗಿರಿಯಲ್ಲಿ ಕುಳಿತಿರುವನಿನಿಗೆ ಸುಪ್ರಭ ತವಾಗಲಿ.

ಹತ್ವಾರಿಮಸ್ಯಪರಿಹಾರ್ಯರುಷಾ ತದೀಯ
ರಕ್ತಂಪಿಬಂಶ್ಚ ಸಿರಯಾ ಭವಮೂವೃತೋರಾಃ ।
ಇತ್ಯಾತ್ಮಶಾಂತಿಮಧಿಗಂತುಮಿವಾಸಿ ಯೋಗೇ
ಶ್ರೀ ಯಾದವಾಚಲತಟೇ ನೃಹರೇ ಪ್ರಭಾತಂ ॥ ೨೧ ॥

ನರಸಿಂಹ್ಮನೇ, ನನ್ನ ಭಕ್ತನಾದ ಪ್ರಹ್ಲಾದನಿಗೆ ಶತ್ರುವಾದ ಹಿರಣ್ಯಕಶಿಪುವನ್ನು ಸಂಹರಿಸಿದರೂ ನನ್ನ ಕೋಪವು ಶಾಂತವಾಗದೆ, ಅವನ ರಕ್ತವನ್ನು ಪಾನ ಮಾಡಿದೆ, ಆದರೂ ಕೋಪ ಶಾಂತವಾಗಲಿಲ್ಲ. ಅವನ ಕರಳನ್ನು ಕಂಠದಲ್ಲಿ ಧರಿಸಿದೆ ಎಂದು ಯೋಚಿಸಿ ಶಾಂತಿಯನ್ನು ಪಡೆಯಲು ಈ ಪವಿತ್ರವಾದ ಯಾದವಾದ್ರಿಯ ಪ್ರಶಾಂತ ಪ್ರದೇಶದಲ್ಲಿ ಕುಳಿತು ಯೋಗನಿರತನಾಗಿರುವೆಯಾ, ಶಾಂತಾತ್ಮನಾದ ನಿನಗೆ ಸುಪ್ರಭಾತವು

ಲೋಕೇಪ್ರತಿಕ್ಷಣಮಪಿ ಪ್ರತಿಪತ್ತುಕಾಮಾಃ
ಭೋಗಾನ್ನರಾ ದುರಿತಸಂತತಿಮಾಚರಂತಿ ।
ಉತ್ತಿಷ್ಠವತ್ಸಲತಯಾ ತದಿಹ ಕ್ಷಮಸ್ವ
ಶ್ರೀಯಾದವಾದ್ರಿನೃಹರೇ ತವಸುಪ್ರಭಾತಂ ॥ ೨೨ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಾದವಾದ್ರಿಯಲ್ಲಿ ಕಂಗೊಳಿಸುವ ನರಸಿಂಹನೇ, ಪ್ರಪಂಚದಲ್ಲಿ ಪ್ರತಿಯೊಂದು ಚೇತನವೂ ಪ್ರತಿಕ್ಷಣದಲ್ಲೂ ಭೋಗಾಪೇಕ್ಷೆಯಿಂದ ಪಾಪವನ್ನು ಗಳಿಸುತ್ತಲೇ ಇರುವುದು, ನೀನೇಳು, ನಿನ್ನ ವಾತ್ಸಲ್ಯವೆಂಬ ಗುಣದಿಂದ ಅದನ್ನೆಲ್ಲಾ ಕ್ಷಮಿಸು. ನಿನಗೆ ಸುಪ್ರಭಾತ ವಾಗಲಿ.

ಪೂರ್ವಂ ರುಷಾ ಪರುಷರೂಪಮಿಯಂ ಸಮೇತ್ಯ
ಮಾಂ ಶಾಂತಚಿತ್ತ ಮತನೋತ್ಸಕಲೇಕ್ಷಣಾರ್ಹಂ ।
ಏವಂ ವಿಚಿಂತ್ಯ ಕಿಮು ವಕ್ಷಸಿ ಪಂಕಜಾಕ್ಷೀಂ
ಧತ್ಸೇ ಶ್ರಿಯಂ ಯದುಗಿರೀಶ ತವ ಪ್ರಭಾತಂ ॥ ೨೩ ॥

ನಾನು ಹಿಂದೇ ಹಿರಣ್ಯಕಶಿಪುವನ್ನು ಸಂಹರಿಸುವಾಗ ಕೋಪಾತಿಶಯದಿಂದ ಜಾಜ್ವಲ್ಯ ಮಾನವಾದ ಭಯಂಕರಾಕಾರವನ್ನು ತಾಳಿದ್ದೆನಷ್ಟೆ, ಆಗ ದೇವಾದಿ ದೇವತೆಗಳೂ ಕೂಡ ನನ್ನನ್ನು ನೋಡಲು ಭಯದಿಂದ ಹಿಂಜರೆಯುತ್ತಿದ್ದರು. ಆ ಸಮಯದಲ್ಲಿ ಈ ಲಕ್ಷ್ಮಿಯು ನನ್ನನ್ನನುಸರಿಸಿ ಕಟಾಕ್ಷಿಸಿ ನನ್ನ ಕೋಪವನ್ನೆಲ್ಲಾ ಹೋಗಲಾಡಿಸಿ ಶಾಂತ ನನ್ನಾಗಿಸಿ ಎಲ್ಲರೂ ನನ್ನನ್ನು ಸುಖವಾಗಿ ದರ್ಶಿಸುವಂತೆ ಮಾಡಿದಳು. ಆದ್ದರಿಂದ ಇವಳು ಯಾವಾಗಲೂ ನನ್ನ ಹೃದಯದಸಮೀಪದಲ್ಲೇ ಇರಲೆಂದು ವಕ್ಷಸ್ಥಲದಲ್ಲಿ ಇಟ್ಟುಕೊಂಡು ಶಾಂತನಾಗಿರುವೆಯೋ ಎಂಬಂತೆ ತೋರುವುದು, ನಿನಗೆ ಸುಪ್ರಭಾತ ವಾಗಲಿ.

ದಾನವ್ರತಾಧ್ವರತಪಃಪ್ರಭೃತೇಃ ಫಲಂ ಯತ್
ತ್ವನ್ನಾಮಸಂಸ್ಮರಣಮಾತ್ರತ ಏವ ಭಕ್ತ್ಯಾ ।
ಆಪ್ನೋತಿ ತದ್ದುರಿತನಾಶಮವಾಪ್ಯ ಮರ್ತ್ಯಃ
ಶ್ರೀಮನ್ನೃಸಿಹ್ಮ ಭವತೋ ಭವತು ಪ್ರಭಾತಂ ॥ ೨೪ ॥

ದಾನವೇನು, ವ್ರತವೇನು, ಯಾಗವೇನು, ತಪಸ್ಸೇನು, ಇವೇ ಮೊದಲಾದ ಪುಣ್ಯ ಕರ್ಮಗಳಿಂದ ಮನುಷ್ಯನು ಯಾವ ಫಲವನ್ನು ಪಡೆಯುವನೊ, ಲಕ್ಷ್ಮೀವಕ್ಷಸ್ಥಲನಾದ ನರಸಿಂಹನೇ ಭಕ್ತಿ ಪುರಸ್ಸರವಾಗಿ ನಿನ್ನ ನಾಮಸ್ಮರಣ ಮಾಡಿದ ಮಾತ್ರದಿಂದಲೇ ಪಾಪಗಳನ್ನೆಲ್ಲಾ ನೀಗಿಸಿಕೊಂಡು ಅದೇ ಫಲವನ್ನು ಹೊಂದುವನು, ಅಂಥಾ ಮಹಾ ಮಹಿಮೆಯುಳ್ಳ ನರಸಿಹ್ಮನೆಂಬ ನಾಮವುಳ್ಳ ನಿನಗೆ ಸುಪ್ರಭಾತವಾಗಲಿ.

ರಕ್ಷಾರ್ಥಮೇವ ನೃಹರೇ ತ್ವಯಿ ಜಾಗ್ರತೀಹ
ಪಾಪಾತ್ಮಕೋಪಿ ಧುತಭೀತಿರಹಂ ಪ್ರಹೃಷ್ಟಃ ।

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನೈರ್ಘೃಣ್ಯಲಬ್ಧಲಘುಹೃಚ್ಛರಣಂ ಗತೋಸ್ಮಿ
ತ್ವತ್ಪಾದಪದ್ಮಯುಗಲಂ ತವಸುಪ್ರಭಾತಂ ॥ ೨೫ ॥

ಎಲೈ ನರಸಿಂಹನೇ, ನೀನು ರಕ್ಷಿಸುವುದಕ್ಕಾಗಿಯೇ ಜಾಗರೂಕನಾಗಿರಲು ನಾನೇಕೆ ಭಯಪಡಬೇಕು. ನನ್ನಂತೆ ಪಾಪಿಷ್ಠನು ಜಗತ್ತಿನಲ್ಲಿ ಮತ್ಯಾರೂ ಇಲ್ಲ. ಆದರೂ ಭಯವಿಲ್ಲದೆ ಸಂತುಷ್ಟನಾಗಿಯೇ ನೈರ್ಘೃಣ್ಯದಿಂದ ಹಗುರಮನಸ್ಸುಳ್ಳವನಾಗಿ ನಿನ್ನ ಪಾದಾರವಿಂದಗಳೆರಡನ್ನೂ ಶರಣ ಹೊಂದಿರುವೆನು, ನೀನು ನನ್ನನ್ನು ಕೈ ಬಿಡದೆ ರಕ್ಷಿಸಿಯೇ ರಕ್ಷಿಸುತ್ತೀಯೆಂಬ ಭರವಸೆಯುಂಟು ನಿನಗೆ ಸುಪ್ರಭಾತವಾಗಲಿ.

ಲೋಕೇ ಸ್ವಭಾವಮಪಹಾಯ ನಕಿಂಚಿದಸ್ತಿ
ಸಂಕಲ್ಪ ಏವತವತಾವಶ ಇತ್ಯವೈಮಿ ।
ಸಂಸ್ಕಾರಮಗ್ನಮತಿರಸ್ಮ್ಯತ ಏವನಾಥ
ತ್ರಾಯಸ್ವ ಪಾಪಿನಮಮುಂ ನೃಹರೇ ಪ್ರಭಾತಂ ॥ ೨೬ ॥

ಜಗತ್ತಿನಲ್ಲಿ ಪ್ರತಿಯೊಂದು ವಸ್ತುವೂ ತನ್ನ ಸ್ವಭಾವವನ್ನು ಬಿಟ್ಟಿರಲಾರದು. ಇದನ್ನೇ ಸಾಂಖ್ಯಶಾಸ್ತ್ರದಲ್ಲಿ ಹೇಳಿದೆ, "ಸ್ವಭಾವಸ್ಯಾನಪಾಯಿತ್ವಾತ್" ಎಂದು, ನಿನ್ನ ಸಂಕಲ್ಪವೇ ಹಾಗಲ್ಲವೇ, ನಾನಂತೂ ಅನಾದಿವಾಸನಾಸಂಸ್ಕಾರಗಳಿಂದ ಪಾಪಕೃತ್ಯಗಳಲ್ಲೇ ತೊಡಗಿ ಜನನ ಮರಣವೆಂಬ ಸಂಸಾರ ಚಕ್ರದಲ್ಲಿ ಸಿಲುಕಿ ಬಳಲಿ ತೊಳಲುತ್ತಿರುವೆನು. ನನ್ನ ಸ್ವಭಾವವೂ ನನ್ನನ್ನು ಬಿಟ್ಟುಹೋಗಲಾರದಷ್ಟೇ ಆದ್ದರಿಂದ ಕರುಣಾಮೂರ್ತಿಯಾದ ನರಸಿಂಹನೇ, ಪಾಪಿಯಾದ ನನ್ನನ್ನು ಕಾಪಾಡು. ನಿನಗೆ ಸುಪ್ರಭಾತವಾಗಲಿ.

ತ್ವತ್ಪಾದಪದ್ಮಯುಗಲೇ ಸುದೃಢಾ ನೃಸಿಂಹ
ಭಕ್ತಿರ್ನಮೇ ಹೃದಿ ನಚ ವ್ರತದಾನನಿಷ್ಠಃ ।
ಕೈಂಕರ್ಯಬುದ್ಧಿರಪಿಜಾತು ನಮೇ ಪ್ರರೂಢಾ
ತ್ರಾಯಸ್ವಮಾಂಕರುಣಯಾ ತವ ಸುಪ್ರಭಾತಂ ॥ ೨೭ ॥

ಎಲೈ ನರಸಿಂಹನೇ, ನಿನ್ನ ಚರಣಾರವಿಂದಗಳಲ್ಲಿ ದೃಢಭಕ್ತಿಯು ನನ್ನ ಹೃದಯದಲ್ಲಿ ಇನ್ನೂ ಹುಟ್ಟಿಲ್ಲ. ವ್ರತದಾನ, ಇವುಗಳಲ್ಲೂ ನನಗೆ ಆಸಕ್ತಿಯಿಲ್ಲ. ನಿನಗೆ ಕೈಂಕರ್ಯವೆಸುಗುವ ಬುದ್ಧಿಯೂ ನನಗುಂಟಾಗಿಲ್ಲ, ಹೀಗಿರುವ ಈ ಪಾಪಿಯನ್ನು ನೀನು ಕರುಣೆಯೊಂದರಿಂದಲೇ ರಕ್ಷಿಸಬೇಕು, ಕೃಪೆ ತೋರಿ ರಕ್ಷಿಸು. ನಿನಗೆ ಸುಪ್ರಭಾತವಾಗಲಿ.

ಶ್ರೀವೈಷ್ಣವಾಗ್ರ್ಯಕುಲಲಬ್ಧಜನಿಸ್ತು ಸೋಯಂ
ರಾಮಾನುಜಾರ್ಯಚರಣಾಶ್ರಯಣೈಕಭಾಗ್ಯಃ ।

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇತ್ಯಾದರೇಣ ಸುವಿಂಚಿಂತ್ಯಮಯಿ ಪ್ರಸೀದ
ಶ್ರೀಮನ್ನೃಸಿಹ್ಮತವಸಂಪ್ರತಿ ಸುಪ್ರಭಾತಂ ॥ ೨೮ ॥

ನರಹರಿಯೇ, ಇವನೋ ಅಂದರೆ ಶ್ರೀ ವೈಷ್ಣವವಂಶದಲ್ಲಿ ಹುಟ್ಟಿದವನು. ಇವನಲ್ಲಿ ಯಾವ ಗುಣಗಳಿಲ್ಲದಿದ್ದರೂ, ಪಾಪಿಯಾದರೂ, ಲೋಕಗುರುವಾದ ಶ್ರೀ ರಾಮಾನುಜಾಚಾರ್ಯರ ಚರಣಾರವಿಂದಗಳನ್ನು ಆಶ್ರಯಿಸಿದ ಭಾಗ್ಯವನ್ನು ಹೊಂದಿದವನೆಂದು ಯೋಚಿಸಿ ನನ್ನಲ್ಲಿ ಪ್ರಸನ್ನನಾಗು. ಈಗಲೀಗ ನಿನಗೆ ಸುಪ್ರಭಾತವು

ವೇದಾಂತವೇದ್ಯ ನಿರವದ್ಯಗುಣಾಂಬುರಾಶೇ
ಲಕ್ಷ್ಮ್ಯೀವಿಲಾಸನಿಲಯಾಯಿತರಮ್ಯವಕ್ಷಃ ।
ಪೀತಾಂಬರೋರುರುಚಿಪಿಂಗಲಕೇಸತಾಘ
ಶ್ರೀ ಯಾದವಾಚಲಪತೇ ನೃಹರೇ ಪ್ರಭಾತಂ ॥ ೨೯ ॥

ವೇದಾಂತ ವೇದ್ಯನೇ, ಅನಂತ ಕಲ್ಯಾಣ ಗುಣ ಪರಿಪೂರ್ಣನೇ, ಲಕ್ಷ್ಮ್ಯೀ ವಿಲಾಸಕ್ಕೆ ಆವಾಸಸ್ಥಾನವಾದ ವಕ್ಷಸ್ಥಲನೇ, ಪೀತಾಂಬರದ ಕಾಂತಿಯಿಂದ ಇಮ್ಮಡಿಯಾದ ಪಿಂಗಲ ವರ್ಣದ ಕೇಸರರಾಶಿಯುಳ್ಳವನೇ, ಯಾದವಾಚಲಪತಿಯಾದ ನರಹರಿಯೇ, ನಿನಗೆ ಸುಪ್ರಭಾತವಾಗಲಿ.

ಕಲ್ಯಾಣರೂಪಮಶರಣ್ಯಶರಣ್ಯಮೀಡ್ಯಂ
ಕಾರುಣ್ಯಮಾತ್ರಕೃತಸರ್ವಜಗತ್ಪ್ರಸೂತಿಂ ।
ಬ್ರಹ್ಮೇಂದುಶೇಖರಸುರೇಶನಮಚಿ-ತಾಂಘ್ರಿಂ
ತ್ವಾಂದ್ರಷ್ಟುಮಸ್ಮಿ ನನುದರ್ಶಯ ತೇ ಪ್ರಭಾತಂ ॥ ೩೦ ॥

ಮಂಗಳ ಸ್ವರೂಪನಾಗಿಯೂ, ದೀನಾನಾಥ ರಕ್ಷಕನಾಗಿಯೂ, ಸರ್ವ ಜಗತ್ಪೂಜ್ಯನಾಗಿಯೂ, ಕೃಪಾಮಾತ್ರದಿಂದಲೇ ಸರ್ವ ಲೋಕವನ್ನೂ ಸೃಷ್ಟಿಸಿದವನಾಗಿಯೂ, ಚತುರ್ಮುಖನೇನು, ರುದ್ರನೇನು, ಇಂದ್ರನೇನು, ಇವರುಗಳಿಂದ ಪೂಜಿಸಲ್ಪಟ್ಟ ಚರಣಾರವಿಂದವುಳ್ಳವನಾಗಿಯೂ ಇರುವ ಪರಾತ್ಪರನಾದ ನಿನ್ನನ್ನು ದರ್ಶನ ಮಾಡುವುದಕ್ಕಾಗಿಯೇ ನಿಂತಿರುವೆನು, ಎಲೈ ನರಸಿಹ್ಮನೇ, ನಿನ್ನ ದರ್ಶನ ಕೊಡು. ನಿನಗೆ ಸುಪ್ರಭಾತವಾಗಲಿ.

ಆರಾಧನಾಯ ತವ ನಾಥ ಸುವರ್ಣಪೂರ್ಣ-
ಕುಂಭಪ್ರಸೂನತುಲಸೀದಲಧೂಪದೀಪಾಃ ।

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸಜ್ಜಾದ್ವಿಜಾಶ್ಚನಿಗಮಸ್ವರಮಂಜುಕಂಠಾ
ಸ್ತಿಷ್ಠಂತಿ ಜಾಗೃಹಿ ಹರೇ ತವಸುಪ್ರಭಾತಂ ॥ ೩೧ ॥

ಎಲೈ ನರಸಿಂಹನೇ, ನಿನ್ನ ಆರಾಧನಕ್ಕಾಗಿ, ಚಿನ್ನದಪೂರ್ಣ ಕುಂಭವೇನು, ಪುಷ್ಪ ಗಳೇನು, ತುಲಸೀದಳಗಳೇನು, ಧೂಪವೇನು, ದೀಪವೇನು, ಇವುಗಳೆಲ್ಲವೂ ಸಿದ್ಧವಾಗಿರುವುವು, ಮತ್ತು ವೇದಪಾರಂಗತರಾದ ವಿಪ್ರೋತ್ತಮರು ಸುಸ್ವರದೊಡನೆ ವೇದ ಪಾರಾಯಣ ಮಾಡುತ್ತಾ ನಿಂತಿರುವರು, ನೀನೆಚ್ಚರು, ನಿನಗೆ ಸುಪ್ರಭಾತವಾಗಲಿ.

ಪೂರ್ವಾನುವೃತ್ತಗುರುಸಂತತಿಮಂಗಲೋಕ್ತಿ
ಸಂಸ್ತೂಯಮಾನಯದುಶೈಲಪತೇ ನೃಸಿಹ್ಮ ।
ತೆನ್ನನ್ನ ಯಂ ಭುವನಮಂಗಲಮಾದಿಮೂರ್ತೇ
ವಿಶ್ವಾತ್ಮಕೋ ವಿಲಸಸೀಹ ತವ ಪ್ರಭಾತಂ ॥ ೩೨ ॥

ಪೂರ್ವಾಚಾರ್ಯರ ಪರಂಪರೆಯಿಂದ ಮಾಡಲ್ಪಟ್ಟ ಮಂಗಲಾಶಾಸನಗಳಿಂದ ಸ್ತುತಿಸಲ್ಪಡುತ್ತಲಿರುವ ಯದುಗಿರಿನಿಲಯನಾದ ನರಹರಿಯೇ, ನೀನು ಲೋಕಕ್ಕೆಲ್ಲಾ ಮಂಗಲವನ್ನುಂಟುಮಾಡುವ ಆದಿಮೂರ್ತಿ, ವಿಶ್ವಾತ್ಮಕನಾಗಿ, ಪ್ರಕಾಶಿಸುತ್ತಲಿದೀಯೆ, ನಿನಗೆ ಸುಪ್ರಭಾತವಾಗಲಿ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಮನ್ನೃಸಿಹ್ಮ ಮಂತ್ರ ಬೀಜಾಕ್ಷರವೊಳಗೊಂಡ

ಮಂಗಲಾಶಾಸನಂ

ಕ್ಷಪಿತಾಶ್ರಿತದುಃಖಾಯ ರಕ್ಷಾದಕ್ಷಾಯ ಸಾಕ್ಷಿಣೇ ।
ಓಂಕಾರರೂಪಿಣೇ ತಸ್ಮೈ ನರಸಿಹ್ಮಾಯ ಮಂಗಲಂ ॥ ೧ ॥

ಆ ಶ್ರಿತರ ಕ್ಲೇಶಗಳನ್ನು ಪರಿಹರಿಸಿ, ಅವರ ರಕ್ಷಣೆಯಲ್ಲಿ ಬದ್ಧದೀಕ್ಷೆಯುಳ್ಳ, ಸರ್ವಸಾಕ್ಷಿಯಾದ, ಪ್ರಣವ ಸ್ವರೂಪಿಯಾದ, ಶ್ರುತಿಪ್ರತಿಪಾದ್ಯನಾದ ನರಸಿಂಹನಿಗೆ ಮಂಗಳವಾಗಲಿ.

ಉದ್ಗಿರತ್ಯಖಿಲಾನ್ಲೋಕಾನ್ಸಂವರ್ತೇ ಗ್ರಸತೇ ಚ ಯಃ ।
ಉಗ್ರಾಯ ನರಸಿಹ್ಮಾಯ ತಸ್ಮೈ ಸ್ಯಾನ್ನಿತ್ಯ ಮಂಗಲಂ ॥ ೨ ॥

ಯಾವನು ಪ್ರಳಯ ಕಾಲದಲ್ಲಿ ಸಮಸ್ತ ಲೋಕವನ್ನೂ ನುಂಗಿ ಉದರದಲ್ಲಿಟ್ಟು ಸೃಷ್ಟಿ ಕಾಲದಲ್ಲಿ ಅವುಗಳನ್ನು ಹೊರಗೆ ಉಗಿಯುವನೋ ಅಂತಹ ಉಗ್ರರೂಪಿಯಾದ ನರಸಿಂಹ್ಮನಿಗೆ ಮಂಗಳವಾಗಲಿ.

ಸರ್ವೈರವಧ್ಯಂ ದೈತ್ಯೇಶಂ ತೀಕ್ಷ್ಣೈರ್ನಖೈಸ್ತ್ವಯಃ ।
ವಿದಾರ್ಯಾಹನ್ನುರೋದೇಶೇ ತಸ್ಮೈ ವೀರಾಯ ಮಂಗಲಂ ॥ ೩ ॥

ಯಾವನು ದೇವಾದಿ ದೇವತೆಗಳಿಂದಲೂ ಅವಧ್ಯನಾದ ಹಿರಣ್ಯಕಶಿಪುವನ್ನು ತೀಕ್ಷ್ಣವಾದ ಉಗುರುಗಳಿಂದಲೇ ವಕ್ಷಸ್ಥಲದಲ್ಲಿ ಸೀಳಿ ಸಂಹರಿಸಿದನೋ, ಅಂತಹ ವೀರನರಸಿಂಹ್ಮನಿಗೆ ಮಂಗಳವಾಗಲಿ.

ಪದ್ಭ್ಯಾಮಾಕ್ರಮ್ಯಪಾತಾಲಂ ಶಿರಸಾ ತ್ರಿದಿವಂ ತಥಾ ।
ಅಷ್ಟದಿಗ್ಬಾಹುದಂಡೋಯಸ್ತಸ್ಮೈ ಭದ್ರಂಚ ವಿಷ್ಣವೇ ॥ ೪ ॥

ಯಾವನು ಎರಡು ಪಾದಗಳಿಂದಲೂ ಪಾತಾಲವನ್ನಾಕ್ರಮಿಸಿ, ತನ್ನ ಶಿರಸ್ಸಿನಿಂದ ಸ್ವರ್ಗಾದಿಲೋಕಗಳನ್ನಾಕ್ರಮಿಸಿ, ಎಂಟು ದಿಕ್ಕುಗಳನ್ನೂ ತನ್ನ ತೋಳುಗಳಿಂದ ಆಕ್ರಮಿಸಿ ಸರ್ವತ್ರ ವ್ಯಾಪನಶೀಲನಾಗಿರುವನೋ, ಅಂತಹ ಮಹಾ ವಿಷ್ಣುವಿಗೆ ಮಂಗಳವಾಗಲಿ-

ತೇಜಸಾ ಯಸ್ಯ ಚಂದ್ರಾರ್ಕ ನಕ್ಷತ್ರಗ್ರಹವಹ್ನಯಃ ।
ಜ್ವಲಂತಿ ತಸ್ಮೈ ಜ್ವಲತೇ ನರಸಿಹ್ಮಾಯ ಮಂಗಲಂ ॥ ೫ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಾವನ ತೇಜೋ ವಿಶೇಷದಿಂದ, ಚಂದ್ರನೇನು, ಸೂರ್ಯನೇನು, ನಕ್ಷತ್ರಗಳೇನು, ಗ್ರಹ ಗಳೇನು, ಬೆಂಕಿಯೇನು, ಇವುಗಳೆಲ್ಲವೂ ಜಾಜ್ವಲ್ಯಮಾನವಾಗಿ ಪ್ರಕಾಶಿಸುವುವೋ ಅಂತಹ ತೇಜೋಮಯನಾದ ನರಸಿಹ್ಮನಿಗೆ ಮಂಗಳವಾಗಲಿ.

ವಿನೇಂದ್ರಿಯಾಣಿ ಸರ್ವತ್ರ ಸರ್ವಂ ಜಾನಾತಿ ಸರ್ವದಾ ।
ಯಸ್ಸರ್ವತೋಮುಖಾಯಸ್ಯಾತ್ತಸ್ಮೈ ಶ್ರೀ ಭದ್ರಂರಮಾಜುಷೇ ॥ ೬ ॥

ಯಾವನು ಇಂದ್ರಿಯಗಳ ಸಹಾಯವನ್ನಪೇಕ್ಷಿಸಿದಯೇ ಬ್ರಹ್ಮಾಂಡಗಳಲ್ಲಿರುವ, ಮತ್ತು ನಡೆಯುವ. ಸಮಸ್ತವನ್ನೂ, ಸರ್ವ ಕಾಲದಲ್ಲೂ ತಿಳಿದುಕೊಳ್ಳುತ್ತಿರುವನೋ, ಅಂತಹ ಸರ್ವತೋಮುಖನಾದ ಶ್ರಿಯಃಪತಿಯಾದ ನರಸಿಂಹ್ಮನಿಗೆ ಮಂಗಳವಾಗಲಿ.

ಸಟಾತಟಿಜ್ಜ್ವಲಜ್ಜಿಹ್ವ ಸ್ತೀಕ್ಷ್ಣ ದಂಷ್ಟ್ರಾತ್ತಿಡುಜ್ವಲಃ ।
ಯೋಭಾತಿನರಸಿಹ್ಮಾಯತಸ್ಮೈ ಶ್ರೀಸ್ಯಾನ್ನಿತ್ಯ ಮಂಗಲಂ ॥ ೭ ॥

ಮಿಂಚನಂತೆ ತೇಜೋಮಯವಾದ ಕೇಸರ ಕಲಾಪಗಳಿಂದ ಜಾಜ್ವಲ್ಯಮಾನವಾದ ನಾಲಿಗೆಯುಳ್ಳವನಾಗಿಯೂ ತೀಕ್ಷ್ಣವಾದ ಕೋರೆ ಹಲ್ಲುಗಳ ಕಾಂತಿಯಿಂದ ಉಜ್ವಲ ರೂಪವುಳ್ಳವನಾಗಿಯೂ ಯಾವನು ಪ್ರಕಾಶಿಸುತ್ತಲಿರುವನೋ, ಅಂತಹ ನರಸಿಹ್ಮನಿಗೆ ನಿತ್ಯ ಮಂಗಲವಾಗಲಿ.

ಯನ್ನಾಮಸ್ಮರಣಾದ್ಭೀತಾ ಭೂತವೇತಾಲರಾಕ್ಷಸಾಃ ।
ರೋಗಾ ನಶ್ಯಂತಿ ತಸ್ಮೈ ಶ್ರೀಸ್ಯಾದ್ಭೀಷಣಾಯಚ ಮಂಗಲಂ ॥ ೮ ॥

ಯಾವನ ನಾಮಸ್ಮರಣ ಮಾತ್ರದಿಂದಲೇ ಭೂತವೇತಾಲರಾಕ್ಷಸಾದಿ ದುಷ್ಟ ಗ್ರಹಗಳು ಭಯಪಟ್ಟು ನಾಶ ಹೊಂದುವವೊ, ಮತ್ತು ಆಧಿವ್ಯಾಧಿಗಳೆಲ್ಲವೂ ನಾಶಹೊಂದುವವೋ ಅಂತಹ ಭೀಷಣನಾದ ನರಸಿಹ್ಮನಿಗೆ ಮಂಗಲವಾಗಲಿ.

ಯಂಸಮಾಶ್ರಿತ್ಯಸರ್ವೋಪಿ ಸಕಲಂ ಭದ್ರಮಶ್ನುತೇ ।
ಶ್ರಿಯಾಜುಷ್ಟಾಯ ತಸ್ಮೈ ಶ್ರೀಸ್ಯಾದ್ಭದ್ರಾಯಚ ಸುಮಂಗಲಂ ॥ ೯ ॥

ಯಾವನನ್ನು ಆಶ್ರಯಿಸಿ ಸಮಸ್ತ ಚೇತನವೂ ಸಮಸ್ತವಾದ ಶುಭವನ್ನೂ ಪಡೆಯು ವುದೋ ಅಂತಹ ಲಕ್ಷ್ಮಿಯಿಂದ ಸೇವಿಸಲ್ಪಡುತ್ತಲಿರುವ ಭದ್ರಾತ್ಮಕನಾದ ನರಸಿಂಹ್ಮನಿಗೆ ಮಂಗಲವಾಗಲಿ.

ಸಾಕ್ಷಾತ್ಸಿಪಕ್ಷಂ ಮೃತ್ಯುಂಚ ಭಕ್ತಾನಾಂ ಯೋ ವಿನಾಶಯೇತ್ ।
ಮೃತ್ಯೋಶ್ಚ ಮೃತ್ಯವೇ ತಸ್ಮೈ ನರಸಿಹ್ಮಾಯ ಮಂಗಲಂ ॥ ೧೦ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಾವನು ಸಾಕ್ಷಾತ್ತಾಗಿ ಭಕ್ತರುಗಳ ಶತ್ರುವನ್ನೂ ಮೃತ್ಯುವನ್ನೂ ಕೂಡ ನಾಶಗೊಳಿಸುವನೋ, ಅಂಥ ಮೃತ್ಯುವಿಗೂ ಮೃತ್ಯುವಾದ ನರಸಿಂಹನಿಗೆ ಮಂಗಳವಾಗಲಿ.

ಯಸ್ಮೈ ಕೃತ್ವಾ ನಮಸ್ಕಾರಂ ವಿಧಾಯಾತ್ಮನಿವೇದನಂ ।
ತ್ಯಕ್ತದುಃಖೋ ನರಃ ಕಾಮಾನಶ್ನುತೇ ತಂ ನಮಾಮ್ಯಹಂ ॥ ೧೧ ॥

ಯಾವನಿಗೆ ನಮಸ್ಕರಿಸಿ ಮನುಷ್ಯನು ಆತ್ಮನಿವೇದನ ಮಾಡಿಕೊಂಡು ದುಃಖಗಳನು ತ್ಯಜಿಸಿ ಸಮಸ್ತ ಇಷ್ಟಾರ್ಥಗಳನ್ನು ಪಡೆಯುವನೋ ಅಂಥ ಸರ್ವಾಭೀಷ್ಟಫಲಪ್ರದನಾದ ನರಸಿಹ್ಮನನ್ನು ನಾನು ನಮಸ್ಕರಿಸುವೆನು.

ದಾಸಭೂತಾಸ್ಸ ..ತಸ್ಸರ್ವೇಷ್ಯಾತ್ಮಾನಃ ಪರಮಾತ್ಮನಃ ।
ಅತೋಽಹಮಪಿ ತೇದಾಸ ಇತಿ ಮತ್ವಾ ನಮಾಮ್ಯಹಂ ॥ ೧೨ ॥

ಎಲೈ ನರಸಿಂಹ್ಮನೇ, ಜೀವಾತ್ಮಗಳೆಲ್ಲವೂ ನಿನಗೆ ದಾಸಭೂತವಲ್ಲವೇ, ಆದ್ದರಿಂದಲೇ ನಾನೂ ಕೂಡ ನಿನಗೆ ದಾಸನು, ಆದ್ದರಿಂದಲೇ ನಾನು ನಿನಗೆ ನಮಸ್ಕರಿಸುವೆನು.

ಆಧಿವ್ಯಾಧಿಮಹಾಭೀತಿಮಹಾದುಃಖನಿವಾರಕ ।
ಅಪಾರಕರುಣಾಸಿಂಧೋ ದಿವ್ಯಸಿಂಹ್ಮನಮೋಸ್ತುತೇ ॥ ೧೩ ॥

ಮನೋವ್ಯಥೆ, ರೋಗೋಪದ್ರವ, ಭಯ, ದುಃಖ ಇವುಗಳೆಲ್ಲವನ್ನೂ ಪರಿಹರಿಸುವ ನರಸಿಹ್ಮನೇ, ನಿರವಧಿಕದಯಾಸಿಂಧೋ ನಿನಗೆ ನಮಸ್ಕಾರವು.

ಪೂರ್ವಾಚಾರ್ಯಕೃತೈರ್ಭಕ್ತ್ಯಾ ಮಂಗಲಾಶಾಸನೈಶ್ಚಿರಾತ್ ।
ಸ್ತೂಯಮಾನಾಯ ತಸ್ಮೈ ಶ್ರೀನರಸಿಂಹಾಯ ಮಂಗಲಂ ॥ ೧೪ ॥

ನಿರತಿಶಯ ಭಕ್ತಿಪೂರ್ಣರಾದ ಪೂರ್ವಾಚಾರ್ಯ ಪರಂಪರೆಯಿಂದ ಮಾಡಲ್ಪಟ್ಟ ಮಂಗಲಾಶಾಸನ ರೂಪವಾದ ಸ್ತೋತ್ರಗಳಿಂದ ಬಹಳ ಕಾಲದಿಂದಲೂ ಸ್ತುತಿಸಲ್ಪಡುತ್ತಲಿರುವ ಶ್ರುತಿ ಪ್ರತಿಪಾದ್ಯನಾದ ನರಸಿಂಹನಿಗೆ ಮಂಗಳವಾಗಲಿ.

ಸುಪ್ರಭಾತಮಿದಂ ಭಕ್ತ್ಯಾ ಪ್ರಾತರುತ್ಥಾಯ ಯಃಪಠೇತ್ ।
ಆಯುರಾರೋಗ್ಯಮೈಶ್ವರ್ಯಂ ಸೋಶ್ನುತೇ ಹರ್ಯನುಗ್ರಹಾತ್ ॥ ೧೫ ॥

ಯಾವನು ಈ ನರಸಿಂಹ್ಮ ಸುಪ್ರಭಾತವನ್ನು ಪ್ರಾತಃಕಾಲದಲ್ಲಿ ಭಕ್ತಿಯಿಂದ ಹೇಳುವನೋ, ಅವನು ದೀರ್ಘಾಯುಸ್ಸನ್ನೂ, ಆರೋಗ್ಯವನ್ನೂ ಐಶ್ವರ್ಯವನ್ನೂ ಕೂಡ ಭಗವಂತನ ಅನುಗ್ರಹದಿಂದ ಪಡೆದು ಸುಖಿಯಾಗುವನು.

ಇತಿ ಶ್ರೀ ಜಗ್ಗೂವಕುಲ ಭೂಷಣ ಕವಿ ವಿರಚಿತವಾದ ನರಸಿಹ್ಮ
ಸುಪ್ರಭಾತವು ಸಂಪೂರ್ಣ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀ ಜಗ್ಗೂ ಶಿಂಗರಾರ್ಯವಿರಚಿತ

ಮಂಗಲಾಶಾಸನಂ

ವದನೋಜ್ಜ್ವಲ ದಂಷ್ಟ್ರಾಯ ಯದುಶೈಲಾಗ್ರವಾಸಿನೇ ।
ಮುದಿರಾಸಿತಗಾತ್ರಾಯ ಸದಯಾಯಾಸ್ತು ಮಂಗಲಂ ॥ ೧ ॥

ಮುಖದಲ್ಲಿ ಬಾಯಲ್ಲಿ ಪ್ರಕಾಶಿಸಿರುವ ಕೋರೆಗಳನ್ನು ಯದುಶೈಲ ಶಿಖರದಲ್ಲಿ ವಾಸಿಸುವ ನೀಲಮೇಘಶ್ಯಾಮನಾದ ದಯಾಪೂರ್ಣನಿಗೆ ಮಂಗಲವಾಗಲಿ.

ಸುಖದಾತ್ಮಸ್ವರೂಪಾಯ ನಖದೀರ್ಣಾರಿವಕ್ಷಸೇ ।
ಮುಖಮಾತ್ರಮೃಗೇಂದ್ರಾಯ ಮಖಭೋಕ್ತ್ರೇಸ್ತು ಮಂಗಲಂ ॥ ೨ ॥

ಸುಖವನ್ನುಂಟುಮಾಡುವ ತನ್ನ ಸ್ವರೂಪವುಳ್ಳವನಾಗಿಯೂ, ಉಗುರುಗಳಿಂದ ಶೀಳಲ್ಪಟ್ಟ ಶತ್ರುವಿನ ವಕ್ಷಸ್ಥಲವುಳ್ಳವನಾಗಿಯೂ ಮುಖದಲ್ಲಿ ಮಾತ್ರ ಸಿಹ್ಮನಾಗಿಯೂ ಇರುವ ಯಜ್ಞ ಭೋಕ್ತಾವಾದ ನರಸಿಹ್ಮನಿಗೆ ಮಂಗಲವಾಗಲಿ.

ಕರಸ್ಥಶಂಖಚಕ್ರಾಯ ನಿರಸ್ತಾಶ್ರಿತಪಾಪ್ಮನೇ ।
ಉರಸ್ಥಶ್ರೀ ಮನೋಜ್ಞಾಯ ಸುರಸ್ತುವ್ಯಾಯ ಮಂಗಲಂ ॥ ೩ ॥

ಕೈಗಳಲ್ಲಿ ಶಂಖಚಕ್ರಗಳನ್ನು ಧರಿಸಿರುವ, ಆಶ್ರಿತರ ಪಾಪವನ್ನೆಲ್ಲಾ ನಾಶಮಾಡಿದ, ಲಕ್ಷ್ಮೀವಕ್ಷಸ್ಥಲನಾದ, ದೇವತೆಗಳಿಂದ ಸ್ತುತಿಸಲ್ಪಡುವ ನರಸಿಹ್ಮನಿಗೆ ಮಂಗಲವಾಗಲಿ.

ಕೃಶಮಧ್ಯಪ್ರದೇಶಾಯ ವಿಶಾಲೋರಸ್ಥಲಾಯ ತೇ ॥
ಪಿಶಿತಾಶಪಿಶಾಚಾದಿ ಮಶಕಘ್ನಾಯ ಮಂಗಲಂ ॥ ೪ ॥

ಕೃಶವಾದ ನಡುವುಳ್ಳವನಾಗಿಯೂ, ವಿಶಾಲವಾದ ಎದೆಯುಳ್ಳವನಾಗಿಯೂ, ರಾಕ್ಷಸ ಪಿಶಾಚಗಳೆಂಬ ಸೊಳ್ಳೆಗಳನ್ನು ನಾಶಮಾಡಿದ ನರಸಿಹ್ಮನಿಗೆ ಮಂಗಲವಾಗಲಿ.

ಸ್ತಂಭಸಂಭವಸಂಬ್ರುಂಭಸ್ತಂಭಿತಾಂಭೋಜಭೂಹೃದೇ ।
ಶಂಭುದಂಭಭಿದೇ ಭೂಯಾಜ್ಜೃಂಭಿತಾಂಗಾಯ ಮಂಗಲಂ ॥ ೫ ॥

ಕಂಬದಿಂದುದಿಸುವ ಸಂಭ್ರಮದಿಂದ ಸ್ತಬ್ಧವಾಗಿ ಮಾಡಲ್ಪಟ್ಟ ಚತುರ್ಮುಖನ ಹೃದಯವುಳ್ಳವನಾದ, ಮತ್ತು ಶಂಭುವಿನ ದಂಭವನ್ನು ಮುರಿಯುವ ಭಯಂಕರಾಕಾರವುಳ್ಳ ನರಸಿಹ್ಮನಿಗೆ ಮಂಗಲವಾಗಲಿ.

ಶರಣ್ಯಾಯ ವರೇಣ್ಯಾಯ ಹಿರಣ್ಯಕಶಿಪುಚ್ಛಿದೇ ।
ಸ್ಥಿರಯೋಗಾಸನಸ್ಥಾಯ ನರಸಿಹ್ಮಾಯ ಮಂಗಲಂ ॥ ೬ ॥

ಆಶ್ರಿತರಕ್ಷಕನಾಗಿಯೂ, ಸರ್ವಶ್ರೇಷ್ಠನಾಗಿಯೂ, ಹಿರಣ್ಯಕಶಿಪುವನ್ನು ಸಂಹರಿಸಿ ಯೋಗಾಸನದಲ್ಲಿ ಕುಳಿತಿರುವ ನರಸಿಹ್ಮನಿಗೆ ಮಂಗಲವಾಗಲಿ.

ಮಂಗಲಾಶಾಸನಂ ಸಂಪೂರ್ಣಂ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

श्री

शुभमस्तु

चग्गू श्री वकुलभूषणकवि विरचितम्

यदुशैलयोगनरसिंह सुप्रभातम्

श्रीमते रामानुजाय नमः

श्रीमते नरसिंहाय नमः

कौसल्या सुप्रजा राम पूर्वा सन्ध्या प्रवर्तते ।
उत्तिष्ठ नरशार्दूल कर्तव्यं दैवमाह्निकम् (१)

उत्तिष्ठोत्तिष्ठ गोविन्द उत्तिष्ठ गरुडध्वज ।
उत्तिष्ठ कमलाकान्त त्रैलोक्यं मङ्गलं कुरु (२)

स्मृत्वा तासवधं स्वकारणभवं खिद्यन्नटन्भूतलं
प्रह्लादः प्रतिपद्य पर्वतमसुं गोमन्तमन्तर्मुखः ।
सालग्रामतनुं तनुं नरहरे भोस्त्वां निधाय क्वचित्
स्नात्वैत्य त्वददर्शनात्स्तुतिपरस्त्वामाप सूपोऽस्तु ते (१)

योगीन्द्रमानससरोवरराजहंस
यद्वद्रिशृङ्गतटकन्दर भव्यवास ।
योगासनप्रकटिताश्रितकांक्षितार्थ-
दानात्तयोग नृहरे तव सुप्रभातम् (२)

प्रह्लादरक्षणकृते नरसिंहरूपः
स्तम्भोदरान्ननु झडित्युदभूर्मुरारे ।
भक्तार्थमेवमविचिन्तितचित्रवेषः
भासि प्रभो नरमृगेन्द्र तव प्रभातम् (३)

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

चक्रायुधोऽपि नखदारितशत्रुवक्षाः
चन्द्राननोऽपि धृतसिह्यमुखो मुकुन्द ।
कण्ठार्पितायतसिरो वनमाल्यपीदं
भक्तार्थमेव ननु ते नृहरे प्रभातम् (४)

प्रह्लादभक्तिभरवश्यमना मुरारे
तत्प्रार्थनानुगुणमत्र नृसिह्यरूपः ।
अर्च्याकृतिर्विलससि प्रतिपन्नयोगः
वात्सल्यमाश्रितजने बत ते प्रभातम् (५)

उत्तुङ्गशृङ्गमधिरुह्य कुतस्स्थितोऽसि
वृद्धोऽपि दूरगत भक्तजनेक्षणार्थम् ।
किंवा सुदृष्टचर एव जरत्स्वभावः
वात्सल्यकार्यमिदमच्युत ते प्रभातम् (६)

कल्याणदिव्यसरसीप्रतिबिम्बितोऽयं
यद्वद्रिशृङ्गवितताच्छ्तगोपुरोऽपि ।
प्रातः पवित्रसलिले ननु मज्जतीव
श्रीमन्नृसिह्म तदभूत्तव सुप्रभातम् (७)

श्रीयादवाद्रिरमणीयविशालसानु-
वृक्षेषु सुप्तिमपहाय पतत्रिणोऽपि ।
कूजन्ति कर्णमधुरं तव जागराय
यद्वद्रिदीप नृहरे तव सुप्रभातम् (८)

त्वय्याहिताखिलभरा मनुजास्समक्ति
कल्याणतीर्थमवगाह्य धृतोर्ध्वपुंड्राः ।
त्वन्मन्दिराङ्गणतटे फलपुष्पहस्ताः
तिष्ठन्ति नाथ नृहरे तव सुप्रभातम् (९)

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

प्रालेयशीतलतरङ्गवहाष्टतीर्थ-
पूताम्बुशीकरकणोद्वहनातिमन्दः ।
सानुप्ररूढसुमसन्ततिगन्धवाही
वाति प्रभो मरुदये तव सुप्रभातम् (१०)

तीर्थाभिषेकसमये नरसिंह सान्द्र-
हारिद्रचूर्णपरिकर्मितसर्वगात्रः ।
साक्षाद्गुहान्तरगतो बत केसरीव
सन्दृश्यसे यदुगिरौ तव सुप्रभातम् (११)

भक्तार्थमेव यदुशैलतटे निषण्णः
वात्सल्यसोढजनतारचितापराधः ।
सौलभ्यकृष्टजनचित्तविलोचनोऽसि
श्रीमन्नृसिंह यदुशैलपते प्रभतम् (१२)

अष्टोत्तरोत्तमशतस्थलसारभूते
विख्यातदक्षिणबदर्यभिधे मनोज्ञे ।
श्रीयादवाचलतटे कृतसन्निधान
योगासनस्थ नृहरे तव सुप्रभातम् (१३)

धृत्वात्मपाणियुगलेन च शंखचक्रे
हस्तद्वयेन परिदर्शितपादपद्मः । युग्मः
एतद्द्वयाङ्कितभुजा इदमाश्रयध्व-
मित्यादिशस्यपि किमत्र हरे प्रभातम् (१४)

मर्त्यालिदुष्कृतगजव्रजपिङ्गदृष्टे
पञ्चाग्र्यभागवतसेवितपादपद्म ।
भक्तार्पिताखिलपरिष्करणोज्वलाङ्ग
यद्वद्रिनाथ नृहरे तव सुप्रभातम् (१५)

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

वृक्षात्मतामुपगता इह सूरयोऽपि
पुन्नागचम्पकरसालमुखस्वरूपाः ।
शाखाभुजाग्रविधृतप्रसवाः पिकालि-
नादोच्चसाममुखरास्तव सुप्रभातम् (१६)

वक्षस्स्थलेन कमलां सततं वहन्सन्
योगैकसक्तहृदयोऽसि विचित्रमेतत् ।
भक्तेष्टदः पुरुषकारमपेक्षसे वा
नूनं नृसिंह यदुशैलपते प्रभातम् (१७)

योगासनस्थमुरुलम्बितजानुबाहुं
स्तोकावनम्रवदनं कुटिलभ्रुवञ्च ।
पृच्छन्तमागतसुखागमनन्तिवं त्वां
पश्यामि नाथ नृहरे तव सुप्रभातम् (१८)

रामानुजार्यहृदयातुलमोददायिन्
श्रीवैष्णवारिनृपचोलनिषूदनेन ।
श्रीभाष्यकारकृतमङ्गलसन्नुताद्य
श्रीयादवाद्रिनृहरे तव सुप्रभातम् (१९)

शान्तिर्मुखे नयनयोरपि सन्निधत्ते
पाणिद्वयं पदयुगं परिदर्शयत्त ।
भक्तालिसंश्रयणयोग्यमितीव शंसत्
भाति प्रभो नरमृगेन्द्र तव प्रभातम् (२०)

हत्वारिमप्यपरिहार्यरुषा तदीय-
रक्तं पिबंश्च सिरयाभवमावृतोराः ।
इत्यात्मशान्तिमधिगन्तुमिवासि योगे
श्रीयादवाचलतटे नृहरे प्रभातम् (२१)

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

लोके प्रतिक्षणमपि प्रतिपत्तुकामाः
भोगान्नरा दुरितसन्ततिमाचरन्ति ।
उत्तिष्ठ वत्सलतया तदिह क्षमस्व
श्रीयादवाद्रिनृहरे तव सुप्रभातम् (२२)

पूर्वं रुषा परुषरूपमियं समेत्य
मां शान्तचित्तमतनोत्सकलेक्षणार्हम् ।
एवं विचिन्त्य किमु वक्षसि पङ्कजाक्षीं
धत्से श्रियं यदुगिरीश तव प्रभातम् (२३)

दानव्रताध्वरतपःप्रभृतेः फलं यत्
त्वन्नामसंस्मरणमात्रत एव भक्त्या ।
आप्नोति तद्दुरितनाशमवाप्य मर्त्यः
श्रीमन्नृसिंह भवतो भवतु प्रभातम् (२४)

रक्षार्थमेव नृहरे त्वयि जाग्रतीह
पापात्मकोऽपि धृतभीतिरहं प्रहृष्टः ।
नैर्भर्यलब्धलघुहृच्छरणं गतोऽस्मि
त्वत्पादपद्मयुगलं तव सुप्रभातम् (२५)

लोके स्वभावमपहाय न किञ्चिदस्ति
सङ्कल्प एव तव तादृश इत्यवैमि
संस्कारमप्यमतिरस्यत एव नाथ
त्रायस्व पापिनममुं नृहरे प्रभातम् (२६)

त्वत्पादपद्मयुगले सुदृढा नृसिंह
भक्तिर्न मे हृदि न च व्रतदाननिष्ठः ।
कैङ्कर्यबुद्धिरपि जातु न मे प्ररूढा
त्रायस्व मां करुणया तव सुप्रभातम् (२७)

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

श्रीवैष्णवाग्र्यकुललब्धजनिस्तु सोऽयं
रामानुजार्यचरणाश्रयणैकभाग्यः ।
इत्यादरेण सुविचिन्त्य मयि प्रसीद
श्रीमन्नृसिंह तव सम्प्रति सुप्रभातम् (२८)

पूर्वानुवृत्तगुरुसन्ततिमङ्गलोक्ति-
संस्तूयमान यदुशैलपते नृसिंह ।
तन्वन्स्वयं भुवनमङ्गलमादिमूर्ते
विश्वात्मके विलससीह तव प्रभातम् (२९)

वेदान्तवेद्य निरवद्यगुणाम्बुराशे
लक्ष्मीविलासनिलयायितरम्यवक्षः ।
पीताम्बरोरुरुचिपिञ्जलकेसरौघ
श्रीयादवाचलपते नृहरे प्रभातम् (३०)

कल्याणरूपमशरण्यशरण्यमीड्यं
कारुण्यमात्रकृतसर्वजगत्प्रसूतिम् ।
ब्रह्मेन्दुशेखरसुरेशसमर्चितांघ्रिं
त्वां द्रष्टुमस्मि ननु दर्शय ते प्रभातम् (३१)

आराधनाय तव नाथ सुवर्णपूर्ण-
कुम्भप्रसूनतुलसीदलधूपदीपाः ।
सज्जा द्विजाश्च निगमस्वरमञ्जुकण्ठा-
स्तिष्ठन्ति जागृहि हरे तव सुप्रभातम् (३२)

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

मङ्गलाशासनम्

क्षपिताश्रितदुःखाय रक्षादक्षाय साक्षिणे ।
ओङ्काररूपिणे तस्मै नरसिंहाय मङ्गलम् (१)

उद्गिरत्यखिलान्लोकान्संवर्ते ग्रसते च यः ।
उग्राय नरसिंहाय तस्मै स्यान्नित्यमङ्गलम् (२)

सर्वैरवध्यं दैत्येशं तीक्ष्णाग्रैर्नखरैस्तु यः ।
विदार्याऽहन्नुरोदेशे तस्मै वीराय मङ्गलम् (३)

पद्भ्यामाक्रम्य पातालं शिरसा त्रिदिवं तथा ।
अष्टदिग्बाहुदण्डो यस्तस्मै भद्रञ्च विष्णवे (४)

तेजसा यस्य चन्द्रार्कनक्षत्रग्रहवह्नयः ।
ज्वलन्ति तस्मै ज्वलते नरसिंहाय मङ्गलम् (५)

विनेन्द्रियाणि सर्वत्र सर्वं जानाति सर्वदा ।
यस्सर्वतोमुखाय स्यात्तस्मै भद्रं रमाजुषे (६)

सटातटिज्ज्वलज्जिह्वस्तीक्ष्णदंष्ट्रात्विहुज्वलः ।
यो भाति नरसिंहाय तस्मै स्यान्नित्यमङ्गलम् (७)

यन्नामस्मरणाद्भीता भूतवेतालराक्षसाः ।
रोगा नश्यन्ति तस्मै स्याद्भीषणाय च मङ्गलम् (८)

यं समाश्रित्य सर्वोऽपि सकलं भद्रमश्नुते ।
श्रिया जुष्टाय तस्मै स्याद्भद्राय च सुमङ्गलम् (९)

साक्षाद्विपक्षं मृत्युञ्च भक्तानां यो विनाशयेत् ।
मृत्योश्च मृत्यवे तस्मै नरसिंहाय मङ्गलम् (१०)

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

यस्मै कृत्वा नमस्कारं विधायात्मनिवेदनम् ।
त्यक्तदुःखो नरः कामानश्नुते तं नमाम्यहम् (११)

दासभूतास्त्वतस्सर्वे ह्यात्मानः परमात्मनः ।
अतोऽहमपि ते दास इति मत्वा नमाम्यहम् (१२)

आधिव्याधिमहाभीतिमहादुःखनिवारक ।
अपारकरुणासिन्धो दिव्यसिंह नमोऽस्तु ते (१३)

पूर्वाचार्यकृतैर्भक्त्या मङ्गलाशासनैश्चिरात् ।
स्तूयमानाय तस्मै स्यान्नरसिंहाय मङ्गलम् (१४)

सुप्रभातमिदं भक्त्या प्रातरुत्थाय यः पठेत् ।
आयुरारोग्यमैश्वर्यं सोश्नुते हर्यनुग्रहात् (१५)

इति श्रीजगद्गुरुकुलभूषणकवि

विरचितं

यादवाद्रेयोगारूढनरसिंहसुप्रभातं

सम्पूर्णम्

शुभमस्तु

श्रीयोगारूढनरसिंहाय परब्रह्मणे नमः

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

CC-0. Bhagavad Ramanuja National Research Institute, Melukote Collection.